ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 27
ಮೇ ೪ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ
★

ಮೇ ದಿನದಂದು ರಾಷ್ಟ್ರದ ಪುನರ್ರಚನೆಗಾಗಿ,

ಎಂ. ಎಸ್. ಕೃಷ್ಣನ್

ಮೇ ದಿನ, ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ದಿನ! ಕಳೆದ 90 ವರ್ಷಗಳಿಂದ ಕಾರ್ಮಿಕ ವರ್ಗವು ವರ್ಗ ಐಕ್ಯತೆಗಾಗಿ, ಜೀವನ ಮಟ್ಟವನ್ನು ಕ್ರಮಪಡಿಸಿಕೊಳ್ಳಲು ಮತ್ತು ತನ್ನದೇ ರಾಜ್ಯಗಳನ್ನು ಸ್ಥಾಪಿಸಲು ಹೋರಾಟ ನಡೆಸಿಕೊಂಡು ಬಂದು ಪ್ರತಿ ವರ್ಷವೂ ಎಷ್ಟು ದೂರ ಗುರಿಸಾಧನೆಯಾಗಿದೆ ಎಂಬುದನ್ನು ಪುನರ್ವಿಮರ್ಶಿಸುವ ದಿನ. ಈ ಧ್ಯೇಯ ಮತ್ತು ಗುರಿ ಸಾಧನೆಗಾಗಿ,—ಹಾಗೂ ಪ್ರಾರಂಭದಲ್ಲಿ (68 ವರ್ಷಗಳಿಗೆ ಮುನ್ನ) ಅಮೆರಿಕದ ಚಿಕಾಗೋ ನಗರದ ಕಾರ್ಮಿಕರು 8 ಗಂಟೆ ಕೆಲಸ, 8 ಗಂಟೆ ವಿರಾಮ ಮತ್ತು 8 ಗಂಟೆ ನಿದ್ರೆ ಇವುಗಳಿಗಾಗಿ ಹೋರಾಡಿ ಪ್ರಾಣ ತೆತ್ತವರಿಂದ ಹಿಡಿದು, ಸಶಸ್ತ್ರ ಬಂಡಾಯ ಹೂಡಿ ತನ್ನದೇ ರಾಜ್ಯ ಸ್ಥಾಪಿಸಿಕೊಳ್ಳಲು, ಬಂಡವಾಳಶಾಹಿಯನ್ನು ನಿರ್ಮೂಲ ಮಾಡಲು ಮಡಿದ ಕಾರ್ಮಿಕರವರೆವಿಗೆ ಎಷ್ಟೋ ಮಂದಿ ಅಮರರಾಗಿರುವವರನ್ನು ನೆನೆದು, ಶ್ರದ್ಧಾಂಜಲಿ ಅರ್ಪಿಸಿ ಮುಂದಿನ ಹೋರಾಟಗಳಿಗೆ, ಕರ್ತವ್ಯ ನಿರ್ವಹಣೆಗೆ ಪಣ ತೊಡುವ ದಿನ. ಈ ಅತಿ ಮುಖ್ಯ ದಿನವನ್ನು ಸಂಬಳ ಸಹಿತ ರಾಷ್ಟ್ರೀಯ ರಜಾ ದಿನವನ್ನಾಗಿ ಸಮತಾವಾದೀ ರಾಷ್ಟ್ರಗಳೂ ಕೆಲವು ಬಂಡವಾಳಶಾಹಿ ರಾಷ್ಟ್ರಗಳೂ ಪರಿಗಣಿಸಿದ್ದರೂ ಸಹ, ನಮ್ಮ ದೇಶದಲ್ಲಿ ಅವಕ್ಕೆ ಈ ಮಾನ್ಯತೆ ಇನ್ನೂ ದೊರೆಯದಿದೆ.

ಶಾಂತಿ ಶಕ್ತಿಗಳ ಮುನ್ನಡೆ

ಕಳೆದ ಒಂದು ವರ್ಷದಲ್ಲಿ ರಾಷ್ಟ್ರೀಯವಾಗಿಯೂ, ಅಂತರ್ರಾಷ್ಟ್ರೀಯವಾಗಿಯೂ ಅನೇಕ ವಿದ್ಯಮಾನಗಳು ಜರುಗಿವೆ. ಮಹತ್ವದ ಘಟನೆಗಳು ಜರುಗಿವೆ: ನಭೋಮಂಡಲವನ್ನೇ ಭೇದಿಸಿ, ಭೂಮಿಯ ಸುತ್ತಲೂ ಅಖಂಡವಾಗಿ ಸುತ್ತಿದ ಎರಡು "ಸ್ಪೂಟ್ನಿಕ್"ಗಳು, ಒಂದೆಡೆ ರಷ್ಯದ ವಿಜ್ಞಾನಿಗಳು ಮುಂದುವರಿದಿರುವುದನ್ನು ಪ್ರದರ್ಶಿಸಿ.ವುದಲ್ಲದೆ, ಇನ್ನೊಂದೆಡೆ ಕಾರ್ಮಿಕ ವರ್ಗವು ಅಧಿಕಾರದಲ್ಲಿರುವ ಸಮತಾವಾದಿ ರಾಜ್ಯ ಎಂತಹ ಅದ್ಭುತ ಕಾರ್ಯಗಳನ್ನು ಮಾಡಬಹುದೆಂಬುದನ್ನು ತೋರಿಸಿದೆ. ಅಕ್ಟೋಬರ್ 1957ರಲ್ಲಿ ಜರುಗಿದ ಈ ಒಂದೇ ಒಂದು ವಿದ್ಯಮಾನದಿಂದಲೇ ವಿಜ್ಞಾನ, ಭೌತಶಾಸ್ತ್ರ, ರಾಜಕೀಯ ಮತ್ತು ಅರ್ಥ ಶಾಸ್ತ್ರಗಳ ಮೇಲೆ ತೀವ್ರವಾದ ಪರಿಣಾಮವನ್ನುಂಟುಮಾಡಿದೆ. ಮೊದಲ ಬಾರಿಗೆ ಅಣುವನ್ನು ಭೇದಿಸಿದಾಗ, ಅಮೆರಿಕವು ಜಪಾನಿನ ಜನತೆಯನ್ನು ಕೊಲ್ಲಲು, ಅಣುಶಕ್ತಿಯನ್ನು ಉಪಯೋಗಿಸಿತು. ಕಾರ್ಮಿಕ ವರ್ಗದ ರಾಜ್ಯವಾದ ಸೋವಿಯತ್ ರಷ್ಯವು ಅಣುಶಕ್ತಿಯನ್ನು ಭೇದಿಸಿ, ಶಾಂತಿಗಾಗಿ ಉಪಯೋಗಿಸಿ ಹೊಸ ಅಧ್ಯಾಯವನ್ನೇ ಬರೆದಿದೆ. ಶಾಂತಿ ಶಕ್ತಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಬಲಗೊಳ್ಳುವಂತೆ ಮಾಡಿದೆ. ನಮ್ಮ ದೇಶ ಮತ್ತು ಸರ್ಕಾರವೂ ಸಹ ಶಾಂತಿಗಾಗಿಯೇ ದುಡಿಯುತ್ತಿದೆ. ಅಣು ಅಸ್ತ್ರಗಳನ್ನೂ, ಹೈಡ್ರೋಜನ್ ಮತ್ತಿತರ ಮಾರಕಾಸ್ತ್ರಗಳನ್ನೂ ಬಹಿಷ್ಕರಿಸಬೇಕೆಂಬ ಕೂಗು ಈ ದಿನ ಎಲ್ಲೆಡೆಗಳಲ್ಲಿಯೂ ಎದ್ದಿದೆ. ಅಣು ಬಾಂಬುಗಳ ಪ್ರಯೋಗಗಳು ಎಂದಿನಂತೆ ನಡೆದಲ್ಲಿ ವಿಶ್ವದ ಎಲ್ಲ ಜನತೆಗೂ ಅಪಾಯಕಾರಿ ಎಂಬುದನ್ನರಿತು ಈಗಾಗಲೇ ಎಲ್ಲ ದೇಶಗಳಲ್ಲೂ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಇದರ ವಿರುದ್ಧ ಪ್ರಚಂಡ

ರಾಷ್ಟ್ರೀಯ ಐಕ್ಯತೆಗಾಗಿ,

ಪ್ರದರ್ಶನ ಪ್ರತಿಭಟನೆ ನಡೆಯುತ್ತಿದೆ. ಬ್ರಿಟನ್ನಿನ ಲೇಬರ್ ಪಕ್ಷವೂ ಸಹ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನಲ್ಲಿ ಇದರ ಬಗ್ಗೆ ಸೂಚನೆ ತರುವಂತೆ ಕಾರ್ಮಿಕ ವರ್ಗ ಒತ್ತಾಯಪಡಿಸಿದೆ. ಅಂತರ್ರಾಷ್ಟ್ರೀಯ ಪ್ರಶ್ನೆಗಳನ್ನೂ ಶಾಂತಿಯುತವಾಗಿ ಬಗೆಹರಿಸಲು ಸೋವಿಯತ್ ರಷ್ಯ ಸೂಚಿಸಿರುವ ಶೃಂಗ ಸಮ್ಮೇಳನಕ್ಕೆ ವಿಶ್ವದ ಕಾರ್ಮಿಕ ವರ್ಗ ಬೆಂಬಲವಿತ್ತಿದೆ. ಯುದ್ಧಕೋರರ ಪ್ರಯತ್ನಗಳು ಅನೇಕ ಕಡೆ ಮಣ್ಣುಗೂಡುತ್ತಿದ್ದರೂ ಸಹ, ತಮ್ಮ ಪಿತೂರಿಯನ್ನು ಅವರಿನ್ನೂ ಪರಿಪೂರ್ಣವಾಗಿ ಬಿಟ್ಟಿಲ್ಲ. ಅಲ್ಜೀರಿಯ, ಇಂಡೋನೇಷಿಯ ಮತ್ತಿತರ ಕಡೆಗಳಲ್ಲಿ ಪಿತೂರಿ ನಡೆಸಿ, ಜನತೆಯ ಸ್ವಾತಂತ್ರ್ಯ ಕಸಿದುಕೊಳ್ಳಲು ಯತ್ನಿಸುತ್ತಿದ್ದಾರೆ. ಯುದ್ಧಸನ್ನಾಹವನ್ನು ನೇಟೊ, ಸೀಟೋ ಬಾಗದಾದ್ ಒಪ್ಪಂದಗಳ ಮೂಲಕ ಮುಂದುವರಿಸಲು ಹವಣಿಸುತ್ತಿದ್ದಾರೆ. ಭಾರತ ಸರಕಾರ ಈಗ ಮಿಲಿಟರಿ ಒಪ್ಪಂದಗಳಿಗೂ, ಯುದ್ಧ ಸನ್ನಾಹಗಳಿಗೂ ವಿರೋಧವಾಗಿರುವುದು ಸ್ವಾಗತಾರ್ಹ. ಶಾಂತಿಗಾಗಿ ದುಡಿಯುತ್ತಿರುವುದಕ್ಕೆ ಕಾರ್ಮಿಕ ವರ್ಗ ಬೆಂಬಲ ನೀಡುವುದಲ್ಲದೆ, ಯುದ್ಧ ಭೀತಿಯನ್ನು ತೊಲಗಿಸಿ ಚಿರಶಾಂತಿ ಸ್ಥಾಪಿಸಲು ನೆರವಾಗುವಂತೆ ದುಡಿಯಲು ಕಾರ್ಮಿಕ ವರ್ಗ ಮೇ ದಿನದಂದು ಪಣ ತೊಡುತ್ತದೆ.

ದ್ವಿತೀಯ ಪಂಚವಾರ್ಷಿಕ ಯೋಜನೆ

ಅಂತರ್ರಾಷ್ಟ್ರೀಯ ಕರ್ತವ್ಯಗಳು ಎಷ್ಟು ಮುಖ್ಯವೋ ಅಷ್ಟೇ ರಾಷ್ಟ್ರೀಯ ಕರ್ತವ್ಯಗಳೂ ಸಹ. ಸರ್ಕಾರ ಈ ದಿನ ಎರಡನೆಯ ಪಂಚ ವಾರ್ಷಿಕ ಯೋಜನೆಯನ್ನು ದೇಶದ ಮುಂದಿಟ್ಟು ಕಾರ್ಮಿಕ ವರ್ಗದ ಸಹಕಾರ ಪಡೆಯಲೆಣ್ಣಿಸುತ್ತಿದೆ. ಎರಡನೆಯ ಪಂಚ ವಾರ್ಷಿಕ ಯೋಜನೆಯ ಬಗ್ಗೆ ಕಾರ್ಮಿಕ ವರ್ಗ ತೀವ್ರಾಸಕ್ತಿ ವಹಿಸಬೇಕಾಗಿದೆ. ಏಕೆಂದರೆ ಈ ಯೋಜನೆಯಲ್ಲಿ (೧) ಔದ್ಯೋಗೀಕರಣಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. (೨) ಬಹುಭಾಗ ಹಣವು ಸರ್ಕಾರವೇ ನಡೆಸುವ ಕೈಗಾರಿಕೆಗಳ ಬೆಳವಣಿಗೆಗೆ ಉಪಯೋಗಿಸಲಾಗುತ್ತದೆ. (೩) ಇಂಜಿನಿಯರಿಂಗ್, ಉಕ್ಕು ಮತ್ತು ಕಬ್ಬಿಣ, ಗಣಿ ಮತ್ತು ಎಣ್ಣೆ ಮುಂತಾದ ಘನ ಕೈಗಾರಿಕೆಗಳನ್ನು ಬೆಳೆಸಲು ಯೋಜಿಸಲಾಗಿದೆ. (೪) ಈ ಕೈಗಾರಿಕೆಗಳಿಗೆ ಬೇಕಾದ ಧನಸಹಾಯವನ್ನು ಬಂಡವಾಳಶಾಹಿ ರಾಷ್ಟ್ರಗಳಿಂದಲ್ಲದೆ ಸಮತಾವಾದಿ ರಾಷ್ಟ್ರಗಳಿಂದ ಕೂಡ ಪಡೆಯಲು ನಿರ್ಧರಿಸಲಾಗಿದೆ. (೫) ಭೂಸುಧಾರಣೆಗಳನ್ನೂ ಸಹ ತರಲು ನಿರ್ಣಯಿಸಲಾಗಿದೆ. (೬) ಸಮತಾವಾದದ ಗುರಿಯನ್ನು ಮುಂದಿಡಲಾಗಿದೆ. ಈ ಎಲ್ಲ ಅಂಶಗಳನ್ನೂ ಕಾರ್ಮಿಕ ವರ್ಗದ ಹಿತಕ್ಕೆ ಅನುಕೂಲವಾಗಿರುವುದರಿಂದ, ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಕಾರ್ಮಿಕ ವರ್ಗ ಮುಂಬರಬೇಕಾಗಿದೆ. ಯೋಜನೆಯು ಕಾರ್ಯಗತವಾಗದಂತೆ ಯತ್ನಿಸುತ್ತಿರುವ ಗುತ್ತೇದಾರಿ ಬಂಡವಾಳಗಾರರ, ಅಧಿಕಾರಶಾಹಿಗಳ ಕುತಂತ್ರಗಳನ್ನು ಎದುರಿಸಬೇಕಾಗಿದೆ.

ಪ್ರಗತಿಪರ ಕಾರ್ಮಿಕ ನೀತಿ ಅತ್ಯಾವಶ್ಯಕ

ಸರ್ಕಾರದ ಯಾವುದೇ ಯೋಜನೆಯು ಕಾರ್ಯಗತವಾಗಬೇಕಾದಲ್ಲಿ ಜನತೆಯ ಸಹಕಾರ ಇದ್ದೇ ಇರಬೇಕು. ಮುಖ್ಯವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಬೇಕಾದಲ್ಲಿ ಕಾರ್ಮಿಕ ವರ್ಗದ ಸಹಕಾರ ಬೇಕು. ಈರೀತಿಯ ಸಹಕಾರ ಪಡೆಯಬೇಕಾದಲ್ಲಿ ಸರ್ಕಾರದ ಕಾರ್ಮಿಕ ನೀತಿಯು ಕಾರ್ಮಿಕ ವಿರೋಧಿಯಾಗಿಲ್ಲದೆ, ಪ್ರಗತಿಪರ ನೀತಿಯಾಗಿದ್ದಲ್ಲಿ ಮಾತ್ರ ಸಾಧ್ಯ. ಆದರೆ, ಭಾರತ ಸರ್ಕಾರದ ಮತ್ತು ಮೈಸೂರು ಸರ್ಕಾರದ ಕಾರ್ಮಿಕ ನೀತಿಗಳು ಕಾರ್ಮಿಕ ವರ್ಗದ ಸಹಕಾರ ಪಡೆಯುವ ಬದಲು ಅವರನ್ನು ತೃಣೀಕರಿಸುವ ನೀತಿಯಾಗಿದೆ. "ಕಾರ್ಮಿಕ ವರ್ಗದ ಸಹಕಾರ ಬೇಕು", "ಸಮತಾವಾದದ ಮಾದರಿ ಸಮಾಜ ರಚನೆ ಮಾಡುತ್ತೇವೆ," "ಕೈಗಾರಿಕೆ ನಡೆಸಲು ಕಾರ್ಮಿಕರ ಸಹಕಾರ ಪಡೆಯಬೇಕು" ಎಂದೆಲ್ಲ ಉದ್ದುದ್ದ ಘೋಷಣೆಗಳನ್ನು ಜಪಿಸುವ ಕಾಂಗ್ರೆಸ್ ಸರ್ಕಾರ ಕಾರ್ಯತಃ ತನ್ನೆಲ್ಲ ತತ್ವಗಳಿಗೆ ತಿಲಾಂಜಲಿ ಇತ್ತಿದೆ.

ಕಳೆದ ಎಂಟು ವರ್ಷಗಳ ಅವಧಿಯಲ್ಲಿ, ಒಂದೆಡೆ ಉತ್ಪತ್ತಿ ಹೆಚ್ಚಾಗಿರುವುದೂ, ಬಂಡವಾಳಗಾರರ ಲಾಭವು ಹೆಚ್ಚಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಅದೇ ಸಮಯಕ್ಕೆ ಕಾರ್ಮಿಕರ ನಿಜವಾದ ವೇತನವು ಅತ್ಯಲ್ಪ ಹೆಚ್ಚಾಗಿದೆ ಎಂಬುದನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದು.

	ಕೋಟಿ ರೂಪಾಯಿಗಳು	
	1950	1954
ಫ್ಯಾಕ್ಟರಿ ಕೈಗಾರಿಕೆಗಳ ನಿವ್ವಳ ಆದಾಯ	550	760
ಒಟ್ಟು ಕೂಲಿ ಮತ್ತು ಸಂಬಳ	232	249
ಲಾಭ	318	511

(ಲೇಬರ್ ಗೆಜೆಟ್‌ನಿಂದ)

1954ರಿಂದ ಇಲ್ಲಿಯವರೆವಿಗೂ ಸಹ ಮೇಲಿನ ಪರಿಸ್ಥಿತಿಯೇ ಇದೆ. ಅಲ್ಲದೆ, ಇನ್ನೊಂದೆಡೆ ಸಾಮಗ್ರಿ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ವಿಪರೀತವಾಗಿ ಏರುತ್ತಿರುವುದರಿಂದ ಕೂಲಿಯ ಪ್ರಮಾಣವು ಇನ್ನೂ ಕಡಿಮೆಯಾಗಿದೆ. ಈ ಪರಿಸ್ಥಿತಿ ಇರುವುದರಿಂದಲೇ ಕಾರ್ಮಿಕರ ಕೂಲಿಯನ್ನು ಶೇಕಡ 25/- ರಷ್ಟಾದರೂ ಹೆಚ್ಚಿಸಬೇಕೆಂಬ ಕೂಗನ್ನು ಈಗಾಗಲೇ ಎಲ್ಲ ಕೇಂದ್ರ ಕಾರ್ಮಿಕ ಸಂಘಗಳೂ ಮುಂದೆ ಮಾಡಿದೆ. ಸರ್ಕಾರವು ಕಾರ್ಮಿಕ ವರ್ಗ

(ಕೊನೇ ಪುಟ ನೋಡಿ)

ಕಾರ್ಮಿಕ ವರ್ಗದ ಐಕ್ಯತೆಗಾಗಿ, ಪಣತೊಡೋಣ!

★ ರಾಷ್ಟ್ರೀಯ - ಅಂತರರಾಷ್ಟ್ರೀಯ ★

ಒರಿಸ್ಸಾ ಕಾಂಗ್ರೆಸ್ಸಿನಲ್ಲಿ ತೀವ್ರ ಬಿಕ್ಕಟ್ಟು

ಒರಿಸ್ಸಾ ಕಾಂಗ್ರೆಸ್ಸಿನಲ್ಲಿ ಕಳೆದ ಕೆಲವು ದಿನಗಳಲ್ಲಿ ತೀವ್ರ ಬಿಕ್ಕಟ್ಟು ತಲೆದೋರಿದೆ. ಮಂತ್ರಿ ಮಂಡಲ ಉರುಳುವ ಸ್ಥಿತಿಯಲ್ಲಿದೆ. 136 ಮಂದಿಯಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿನ ಸಂಖ್ಯೆ ಕೇವಲ 61 ಆಗಿದೆ. ಒರಿಸ್ಸಾದ ರಾಜಧಾನಿ ಭುವನೇಶ್ವರದಲ್ಲಿ ರಾಜಕೀಯ ವಾತಾವರಣ ಕಲುಷಿತಗೊಂಡಿದೆ ಮತ್ತು ಉದ್ರಿಕ್ತ ವಾತಾವರಣ ಉಂಟಾಗಿದೆ. ವಿರೋಧ ಪಕ್ಷಗಳು ಕಾಂಗ್ರೆಸ್ ಸರಕಾರವನ್ನು ಉರುಳಿಸಲು ತೀವ್ರ ಯತ್ನ ನಡೆಸುತ್ತಿವೆ.

ಏಪ್ರಿಲ್ 27ರಂದು ಒರಿಸ್ಸಾದ ಉಪಸಚಿವ ಶ್ರೀ ಅನೂಪ್‌ಸಿಂಗ್‌ದೇವ್‌ರವರನ್ನು ಮಂತ್ರಿ ಪದವಿಯಿಂದ ಕಿತ್ತು ಹಾಕಲಾಗಿದೆ ಮತ್ತು ಅವರನ್ನು ದಸ್ತಗಿರಿ ಮಾಡಲಾಗಿದೆ.

ಕಾಂಗ್ರೆಸ್ ಸರಕಾರ ತನ್ನ ಆಡಳಿತೆಯನ್ನು ಉಳಿಸಿಕೊಳ್ಳಲು ದಬ್ಬಾಳಿಕೆಯನ್ನಾರಂಭಿಸಿದೆ. ಭುವನೇಶ್ವರದಲ್ಲಿ ಸರಕಾರವು ಮಿಲಿಟರಿ ಪೋಲೀಸನ್ನು ಕರೆಸಿಕೊಂಡಿದೆ. ವಿರೋಧ ಪಕ್ಷಗಳ ಸದಸ್ಯರನ್ನು ಬಂಧಿಸಲಾಗಿದೆ. ಈಗಾಗಲೇ ಗಣತಂತ್ರ ಪರಿಷತ್ತಿಗೆ ಸೇರಿದ ಕೆಲವು ಶಾಸನ ಸಭಾ ಸದಸ್ಯರ ಬಂಧನವಾಗಿದೆ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಿರಾಕರಿಸಲಾಗಿದೆ.

ರಾಜಕೀಯ ಪರಿಸ್ಥಿತಿಯ ಬಗ್ಗೆ ಒರಿಸ್ಸಾದಲ್ಲಿ ಅನೇಕ ಊಹಾಪೋಹಗಳು ಹರಡುತ್ತಿವೆ. ಶಾಸನ ಸಭಾ ಸದಸ್ಯರುಗಳನ್ನು ಹೆದರಿಸಿ, ಮದ್ಯಪಾನ ಮಾಡಿಸಿ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡಿಸಲಾಗುತ್ತಿದೆ ಎಂದು ವದಂತಿಗಳು ಹೊರಡುತ್ತಿವೆ. ಇದು ಎಷ್ಟುಮಟ್ಟಿಗೆ ನಿಜವೆಂಬುದು ತಿಳಿಯದಾಗಿದೆ.

ಒರಿಸ್ಸಾದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿರುವ ಪ್ರಬಲವಾದ ಪಕ್ಷ, ಗಣತಂತ್ರ ಪರಿಷತ್, ಈ ಪಕ್ಷದಲ್ಲಿರುವವರೆಲ್ಲರೂ ಸಾಮಾನ್ಯವಾಗಿ ಹಿಂದಿನ ರಾಜ ಮಹಾರಾಜರುಗಳು ಮತ್ತು ದೊಡ್ಡ ಭೂಮಾಲಿಕರು ಆಗಿದ್ದಾರೆ. ಇತರ ಪಕ್ಷಗಳಾದ ಕಮ್ಯೂನಿಸ್ಟ್, ಪ್ರಜಾ ಸೋಷಿಲಿಸ್ಟ್ ಪಕ್ಷಗಳು ಈ ಪ್ರತಿಗಾಮಿ ಪಕ್ಷಕ್ಕೆ ಹೋಲಿಸಿದಲ್ಲಿ ಇನ್ನೂ ಸಾಕಷ್ಟು ಪ್ರಬಲವಾಗಿಲ್ಲ. ಆದ್ದರಿಂದ ರಾಜ್ಯದ ರಾಜಕೀಯ ವಾತಾವರಣವು ಪ್ರತಿಗಾಮಿಗಳಿಂದ ತುಂಬಿದ್ದು ಕಲುಷಿತಗೊಂಡಿದೆ. ಕಾಂಗ್ರೆಸ್ಸಿನ ಜನ ವಿರೋಧಿ ನೀತಿಗಳ ವಿರೋಧವಾಗಿರುವ ಜನತೆಯ ಅತೃಪ್ತಿಯನ್ನು ತಪ್ಪುದಾರಿಗೆಳೆಯಲಾಗುತ್ತಿದೆ.

ಒರಿಸ್ಸಾದ ಪ್ರಸಕ್ತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಆಡಳಿತೆ ಕುಸಿಯುವುದಂತೂ ಖಂಡಿತ. ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯೇ ಮುಂದಿನ ಗತಿಯಾಗಿದೆ. ಏನೇ ಆದರು ಕಾಂಗ್ರೆಸ್ ತನ್ನ ಆಡಳಿತೆಯನ್ನು ಕಾಪಾಡಿಕೊಳ್ಳಲು ದಬ್ಬಾಳಿಕೆ ಅಸ್ತ್ರವನ್ನು ಪ್ರಯೋಗಿಸುತ್ತಿರುವುದು ಖಂಡನೀಯವಾಗಿದೆ. ಮುಂದಿನ ಬೆಳವಣಿಗೆಗಳನ್ನು ಕುತೂಹಲದಿಂದ ಜನತೆ ನಿರೀಕ್ಷಿಸುತ್ತಿದೆ.

ಕೇರಳ ದೇವಿಕುಲಂ ಕ್ಷೇತ್ರ ಉಪಚುನಾವಣೆ

ಮೇ 16 ರಂದು ಕೇರಳ ರಾಜ್ಯದಲ್ಲಿ ದೇವಿಕುಲಂ ದ್ವಿಸದಸ್ಯ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ಈ ಉಪಚುನಾವಣೆ ರಾಜ್ಯದಲ್ಲಷ್ಟೇ ಅಲ್ಲದೆ, ದೇಶಾದ್ಯಂತವೂ ಜನತೆಯ ಗಮನವನ್ನು ಸೆಳೆದಿದೆ. ಈ ಕ್ಷೇತ್ರದಿಂದ ಹಿಂದೆ ಮಹಾ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದು ಜಯಗಳಿಸಿದ ಶ್ರೀಮತಿ ರೋಸಮ್ಮ ಪೊನ್ನೂಸ್ ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರಾಗಿ ಮತ್ತೆ ಸ್ಪರ್ಧಿಸಿದ್ದಾರೆ. ಇವರ ವಿರುದ್ಧವಾಗಿ ಕಾಂಗ್ರೆಸ್ ಉಮೇದುವಾರರಾಗಿ ಕೇರಳ ಇಂಟಕ್ ನಾಯಕ ಶ್ರೀ ಬಿ. ಕೆ. ನಾಯರ್, ಸ್ವತಂತ್ರ ಉಮೇದುವಾರರುಗಳಾದ ಶ್ರೀ ಡಿ. ಡಾಮಿನಿಕ್ ಮತ್ತು ಎಸ್. ಸುಬ್ರಮಣ್ಯಾಂ ಸ್ಪರ್ಧಿಸಿದ್ದಾರೆ.

ಚುನಾವಣಾ ಪ್ರಚಾರ ಈಗಾಗಲೇ ಬಿರುಸಿನಿಂದ ಆರಂಭವಾಗಿದೆ. ಕಮ್ಯೂನಿಸ್ಟ್ ಉಮೇದುವಾರರನ್ನು ಹೇಗಾದರೂ ಸೋಲಿಸಲು ಕಾಂಗ್ರೆಸ್ ಸರ್ವ ಪ್ರಯತ್ನ ನಡೆಸಿದೆ. ಪ್ರಜಾ ಸೋಷಲಿಸ್ಟ್ ಪಕ್ಷ, ಆರ್.ಎಸ್.ಪಿ ಮುಸ್ಲಿಂಲೀಗ್‌ಗಳು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬೆಂಬಲವಿತ್ತಿದೆ. ಕ್ಯಾಥೊಲಿಕ್ ಚರ್ಚುಗಳು ನೇರವಾಗಿ ಕಾಂಗ್ರೆಸ್ಸಿಗೆ ಪ್ರಚಾರ ಆರಂಭಿಸಿವೆ. ಸಾವಿರಾರು ರೂಗಳನ್ನು ಚುನಾವಣಾ ಪ್ರಚಾರಕ್ಕೆ ಸುರಿದಿದೆ. ಕ್ಯಾಥೊಲಿಕ್ ಕ್ರಿಸ್ತಾಫರ್ ಸಂಸ್ಥೆ ಚುನಾವಣೆಯಲ್ಲಿ ಗುಂಡಾಗಿರಿ ನಡೆಸಲು ಆಗಮಿಸಿದೆ. ಪ್ರತಿಗಾಮಿಗಳೆಲ್ಲರ ಒಕ್ಕೂಟದ ವಿರುದ್ಧ ಕಮ್ಯೂನಿಸ್ಟ್ ಪಾರ್ಟಿ ಚುನಾವಣೆಯ ಹೋರಾಟದಲ್ಲಿ ಇಳಿದಿದೆ.

ಚುನಾವಣಾ ಪ್ರಚಾರದಲ್ಲಿ ರಾಜ್ಯದ ಮಂತ್ರಿಗಳಾರೂ ಭಾಗವಹಿಸುವುದಿಲ್ಲವೆಂದು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ತಿಳಿಸಿದ್ದಾರೆ. ಮಂತ್ರಿ ಮಂಡಲದ ಈ ತೀರ್ಮಾನ ಪ್ರಜಾ ಪ್ರಭುತ್ವಕ್ಕೆ ಮಾದರಿಯಾಗಿದೆ. ಅಧಿಕಾರದಲ್ಲಿರುವ ಕಾಂಗ್ರೆಸ್ ಮಂತ್ರಿಗಳು ಇದನ್ನು ಗಮನದಲ್ಲಿರಿಸುವರೇ ಎಂದು ನೋಡಬೇಕಿದೆ. ಏಕೆಂದರೆ, ಕಾಂಗ್ರೆಸ್ ಸಚಿವರುಗಳು ಪಂಚಾಯ್ತಿ ಚುನಾವಣೆಗಳಲ್ಲೂ ಸಹ ತಮ್ಮ ಅಧಿಕಾರದ ಪ್ರಭಾವ ಬೀರಲು ಎದುರು ನೋಡುವ ನಿದರ್ಶನ ಅನೇಕವಿವೆ.

ಕಳೆದ ಒಂದು ವರ್ಷದಲ್ಲಿ ಕಮ್ಯೂನಿಸ್ಟ್ ಆಡಳಿತೆಯ ಬಗ್ಗೆ ಜನತೆ ಈ ಚುನಾವಣೆಗಳಲ್ಲಿ ತಮ್ಮ ಮತವೀಯಲಿದ್ದಾರೆ. ಈ ಕ್ಷೇತ್ರದಲ್ಲಿ ಹೆಚ್ಚು ಮಂದಿ ತಮಿಳು ಜನರಿದ್ದರೂ, ಅವರ ಹಿತವು ಕಮ್ಯೂನಿಸ್ಟ್ ಆಡಳಿತೆಯಲ್ಲಿ ಸುರಕ್ಷಿತವಾಗಿದೆ ಎಂದು ಅರಿವಾಗಿದೆ. ಚುನಾವಣೆಗಳಿಗೆ ಇನ್ನು ಕೇವಲ ಕೆಲವೇ ದಿನಗಳು ಇವೆ.

ಈ ಅತಿಮುಖ್ಯವಾದ ಉಪ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಉಮೇದುವಾರರಾದ ಶ್ರೀಮತಿ ರೋಸಮ್ಮ ಪೊನ್ನೂಸ್ ಜಯಗಳಿಸುವುದು ಅತ್ಯಗತ್ಯವಾಗಿದೆ. ಈ ಹೋರಾಟದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಎಲ್ಲ ನೆರವೂ ಅಗತ್ಯವಾಗಿದೆ. ಪ್ರಗತಿಪರವಾದ ಸುಧಾರಣೆಗಳಿಗಾಗಿ, ಪ್ರಜಾ ಪ್ರಭುತ್ವದ ವಿಸ್ತರಣೆಗಾಗಿ ಹೋರಾಡುತ್ತಿರುವ ಎಲ್ಲರೂ ತಮ್ಮ ಬೆಂಬಲವನ್ನೀಯುವುದು ಅಗತ್ಯವಾಗಿದೆ. ಈ ಚುನಾವಣೆಗೆ ಹಣ ಕೂಡಿಸಲು ಕೇರಳ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕರೆಯಿತ್ತಿದ್ದಾರೆ. ಚುನಾವಣೆಯು ಕೆಲವೇ ದಿನಗಳಿರುವುದರಿಂದ ಎಲ್ಲರೂ ತಮ್ಮ ಸಹಾಯವನ್ನು ಕೂಡಲೇ ಕಳಿಸಬೇಕೆಂದು ಕೇಳಿಕೊಂಡಿದ್ದಾರೆ. ಪ್ರಗತಿಪರ ಶಕ್ತಿಗಳ ಬೆಂಬಲವನ್ನು ಪಡೆದಿರುವ, ಕಮ್ಯೂನಿಸ್ಟ್ ಉಮೇದುವಾರರು ಈ ಚುನಾವಣೆಯಲ್ಲಿ ವಿಜಯಿಯಾಗುವುದರಲ್ಲಿ ಸಂಶಯವಿಲ್ಲ.

ಸರಕಾರೀ ಆಡಳಿತೆಯಲ್ಲಿ ಅಕ್ರಮ ವೆಚ್ಚ

ಸರಕಾರದ ಆಡಳಿತೆ ಹಾಗೂ ಸರಕಾರೀ ಕೈಗಾರಿಕೆಯಲ್ಲಿ ಅಕ್ರಮವಾಗಿ ದುಂದು ವೆಚ್ಚವಾಗುತ್ತಿರುವ ವಿಷಯ ಎಲ್ಲರಿಗೂ ತಿಳಿದಿದೆ. ಈ ದುಂದು ವೆಚ್ಚದ ಎಲ್ಲ ವಿಷಯಗಳು ಒಮ್ಮೆಗೆ ಬಾರದಿದ್ದರೂ ಕೆಲವು ಅಂಶಗಳು ಹೊರಬೀಳುತ್ತಿವೆ. ಕಳೆದ ವಾರದಲ್ಲಿ ಆಡಿಟ್ ವರದಿಗಳಿಂದ ಎರಡು ಅಂಶಗಳು ಹೊರಬಿದ್ದಿವೆ. ಈ ಎರಡು ಅಂಶಗಳು ಸರಕಾರದ ದುಂದು ವೆಚ್ಚಕ್ಕೆ ನಿದರ್ಶನವಾಗಿವೆ.

ಬೆಂಗಳೂರಿನಲ್ಲಿರುವ ಕೇಂದ್ರ ಸರಕಾರದ ಉದ್ದಿಮೆಯಾದ ಹಿಂದುಸ್ತಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯಲ್ಲಿ ನೌಕರರ ನೇಮಕದಲ್ಲಿ ಅಕ್ರಮವಿದೆಯೆಂದು ಆಡಿಟ್ ವರದಿ ತಿಳಿಸಿದೆ. 1954 ರ ಜುಲೈ ತಿಂಗಳಲ್ಲಿ ಪೈಂಟರ್ ಫೋರ್‌ಮನ್ ಒಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಯಿತೆಂದೂ, ಅಂಥ ಹುದ್ದೆಯ ನೇಮಕ ಅಗತ್ಯವಾಗಿತ್ತೆಂದೂ ತಿಳಿಸಿದೆ. ಅಲ್ಲದೆ ಈ ಫೋರ್‌ಮನ್‌ರವರನ್ನು ವಿದೇಶದಲ್ಲಿ ತರಬೇತಿ ಪಡೆಯಲು ತಿಂಗಳಿಗೆ 1,888 ರೂ. ಸಂಬಳದ ಮೇಲೂ ಮತ್ತು ತಿಂಗಳಿಗೆ 490 ರೂ. ವಿದೇಶೀ ಭತ್ಯದ ಮೇಲೂ ಕಳಿಸಲಾಯಿತು. ಅವರನ್ನು 'ಪ್ಯಾಕಿಂಗ್ ಫೋರ್‌ಮನ್' ಎಂಬು ಕರೆಯಲಾಯಿತು. 1954ರಲ್ಲಿ ಫ್ಯಾಕ್ಟರಿ ಇನ್ನೂ ತಯಾರಿಕೆಯಲ್ಲಿ ತೊಡಗದಿದ್ದುದರಿಂದ ಈ ಹುದ್ದೆಗೆ ನೇಮಕದ ಪ್ರಶ್ನೆಯೇ ಇರಲಿಲ್ಲವೆಂದು ಆಡಿಟ್ ವರದಿ ತಿಳಿಸಿದೆ. ಈ ನೇಮಕಗಳಿಗೆ ವಿದೇಶೀ ಕಂಪೆನಿಯೊಂದರ ಸಲಹೆಯನ್ನು ಅನುಸರಿಸಲಾಯಿತೆಂದು ಹೇಳಲಾಗಿದೆ. ಕೆಲಸ ಆರಂಭವಾಗುವುದಕ್ಕೆ ಮುಂಚೆಯೇ ವಿದೇಶೀ ತಜ್ಞರನ್ನು ಮುಂದಾಗಿ ತೆಗೆದುಕೊಳ್ಳಲಾಗಿದೆ. ಇದರಿಂದಾಗಿ ಕಾರ್ಖಾನೆಯ ಆಡಳಿತೆ ವೆಚ್ಚ ಹೆಚ್ಚಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಈ ಕಾರ್ಖಾನೆಯಲ್ಲಿ ಸ್ವಿಸ್ ಅಧಿಕಾರಿಗಳ ವರ್ತನೆಯು ಹಿಂದೆಯೇ ಎಲ್ಲರಿಗೂ ತಿಳಿದಿದೆ. ತಾಂತ್ರಿಕ ನೆರವಿಗಾಗಿ ಭಾರತಕ್ಕೆ ಆಗಮಿಸಿರುವ ಇವರ ವೆಚ್ಚವೇ ವಿಪರೀತವಾಗಿದೆ. ಇಂಥ ಅಕ್ರಮಗಳನ್ನು ತಡೆಗಟ್ಟಲು ಸರಕಾರ ಕೂಡಲೆ ಕ್ರಮ ತೆಗೆದುಕೊಳ್ಳಬೇಕಾದುದು ಅಗತ್ಯ.

ವಿದೇಶೀ ವಿನಿಮಯ ಸ್ಥಿತಿಯು ಚಿಂತಾಜನಕವಾಗಿರುವ ಪರಿಸ್ಥಿತಿಯಲ್ಲಿ 25,000 ಡಾಲರುಗಳನ್ನು ವೃಥಾ ವ್ಯಯ ಮಾಡಿರುವ ಪ್ರಸಂಗವೊಂದು ವರದಿಯಾಗಿದೆ.

854,784 ಡಾಲರ್ ಬೆಲೆಯ ಗೋಧಿಯನ್ನು ಕೊಂಡಿದ್ದು, ಅದನ್ನು ಹಡಗಿನಲ್ಲಿ ಸಾಗಿಸಲು 235,200 ಡಾಲರು ವೆಚ್ಚವನ್ನು ಕೊಡಲು ಒಪ್ಪಂದವಾಗಿತ್ತು. ಆದರೆ ಸರಕನ್ನು ಹೊತ್ತು ತಂದ ಹಡಗು ನವೆಂಬರ್ 1951ರಲ್ಲಿ ಮುಳುಗಿತು. ಈ ನಷ್ಟವನ್ನು ಹಿಂದಕ್ಕೆ ಪಡೆಯಲು ಸರಕಾರ ಕೋರ್ಟಿನಲ್ಲಿ ಕೇಸು ಹಾಕಿತು. ವ್ಯವಸಾಯ ಮತ್ತು ಆಹಾರ ಶಾಖೆಯ ಸಚಿವಾಲಯದ ಆಜ್ಞೆಯ ಮೇರೆಗೆ ಆ ದೇಶದಲ್ಲಿದ್ದ ರಾಯಭಾರೀ ಕಛೇರಿಯು ಮೊಕದ್ದಮೆಯನ್ನು ಹೂಡಿತು. ವಕೀಲರಿಂದ ಫೀಸಿನ ಹಣದ ಬಗ್ಗೆ ಅಂದಾಜನ್ನು ಪಡೆಯದೆ ರಾಯಭಾರಿ ಕಛೇರಿಯು ವಕೀಲರನ್ನು ನೇಮಿಸಿತು. ಜೂನ್ 1952ರಲ್ಲಿ ವಕೀಲರ ಫೀಸು 7,500 ಡಾಲರುಗಳಿಂದ 363,328 ಡಾಲರ್‌ವರೆಗೆ ಆಗುವುದೆಂದು ತಿಳಿದುಬಂದಿತು. ಆದರೆ ಈ ವೆಚ್ಚವನ್ನು ಕಡಿಮೆ ಮಾಡಲು ದೃಢವಾದ ಕ್ರಮ ತೆಗೆದುಕೊಳ್ಳಲಾಯಿತು. ಮೇ, 1953ರಲ್ಲಿ ವ

(೬ನೇ ಪುಟ ನೋಡಿ)

ಶಾಂತಿಯುತ ಸಾಧನೆ ಮತ್ತು ಮಾರ್ಕ್ಸ್‌ವಾದ

ಎನ್. ಎಲ್. ಉಪಾಧ್ಯಾಯ

ಅಮೃತಸರದಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷದ ಅಧಿವೇಶನದಲ್ಲಾದ ತೀರ್ಮಾನಗಳು ದೇಶದ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿದೆ. ಪಕ್ಷದ ಹೊಸ ಘಟನೆ ಮತ್ತು ಅದರಲ್ಲಿ ನಮೂದಿಸಲಾದ ಪೀಠಿಕೆಯ ಹೊಸ ಅಂಶಗಳ ಬಗ್ಗೆ ಅನೇಕ ರೀತಿಯ ಅಭಿಪ್ರಾಯಗಳು ವ್ಯಕ್ತಪಟ್ಟಿವೆ. ಅದರ ಎರಡು ಮುಖ್ಯ ಅಂಶಗಳು ಹೆಚ್ಚು ಗಮನವನ್ನು ಸೆಳೆದಿವೆ. ಮೊದಲನೆಯದಾಗಿ "ಸಂಪೂರ್ಣ ಪ್ರಜಾ ಪ್ರಭುತ್ವ ಮತ್ತು ಸಮಾಜವಾದವನ್ನು ಶಾಂತಿಯುತವಾಗಿ ಸಾಧಿಸಲು ಭಾರತ ಕಮ್ಯೂನಿಸ್ಟ್ ಪಾರ್ಟಿಯು ಪ್ರಯತ್ನಿಸುವುದು" ಎಂದು ಹೇಳಿರುವುದು ಮತ್ತು ಎರಡನೆಯದಾಗಿ "ಸಮಾಜವಾದಿ ಸಮಾಜದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ವಿಸ್ತರಿಸುವುದು, ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮತ್ತು ದೇಶದ ಘಟನೆಗೆ ಬದ್ಧವಾಗಿದ್ದು ಸರಕಾರವನ್ನು ವಿರೋಧಿಸುವ ವಿರೋಧ ಪಕ್ಷಗಳಿಗೂ ಸಹ ರಾಜಕೀಯ ಸಂಘಟನಾ ಸ್ವಾತಂತ್ರ್ಯಗಳ ಭರವಸೆಯನ್ನು ಕಮ್ಯೂನಿಸ್ಟ್ ಪಾರ್ಟಿ ಕೊಡುತ್ತದೆ"ಂದು ತಿಳಿಸಿರುವುದು ಅನೇಕರನ್ನು ಚಕಿತಗೊಳಿಸಿರುತ್ತದೆ.

ಪಕ್ಷದ ಘಟನೆಯಲ್ಲೇ ಮಾಡಿದ ಈ ಸ್ಪಷ್ಟೀಕರಣದ ಬಗ್ಗೆ ಎರಡು ತರದ ಪ್ರತಿಕ್ರಿಯೆ ಬಂದಿದೆ. ಪ್ರಗತಿಗಾಮಿಗಳೂ, ಪ್ರಜಾಪ್ರಭುತ್ವವಾದಿಗಳೂ ಇದನ್ನು ಸ್ವಾಗತಿಸುತ್ತಾರೆ. ಎಷ್ಟೋ ಜನ ವಿಭಾಗಗಳಲ್ಲಿ ಈ ಘೋಷಣೆ ಹೊಸ ಉತ್ಸಾಹ ತುಂಬಿದೆ. ಪಾರ್ಟಿಯ ಬಗ್ಗೆ ಗೌರವವಿದ್ದರೂ ಅದನ್ನು ಸೇರಲು ಸಂಕೋಚ ಪಡುತ್ತಿದ್ದ ಅನೇಕ ಮಧ್ಯಮ ವರ್ಗದವರು ಮತ್ತು ಬುದ್ಧಿಜೀವಿಗಳು ಪಾರ್ಟಿ ಈಗ ಮಾಡಿರುವ ಸ್ಪಷ್ಟೀಕರಣದಿಂದ ತೃಪ್ತರಾಗಿದ್ದಾರೆ. ಇದರಿಂದ ಪಾರ್ಟಿಯ ತೀವ್ರ ಬೆಳವಣಿಗೆಗೆ ಬಹಳ ಸಹಾಯಕವಾಗುವುದೆಂದೂ ಅನೇಕರು ಅಭಿಪ್ರಾಯ ಪಟ್ಟಿದ್ದಾರೆ.

ಆದರೆ, ಈ ಕಾರಣದಿಂದಲೇ, ಕಮ್ಯೂನಿಸ್ಟ್ ವಿರೋಧಿಗಳೂ, ಪ್ರತಿಗಾಮಿಗಳೂ ಕಂಗಾಲಾಗಿದ್ದಾರೆ. "ಕಮ್ಯೂನಿಸ್ಟರು ಹಿಂಸೆಕೋರರು", "ಸರ್ವಾಧಿಕಾರಿಗಳು", "ಪ್ರಜಾ ಪ್ರಭುತ್ವ ವಿರೋಧಿಗಳೆಂದು" ನಿರಂತರ ಅಪಪ್ರಚಾರ ಮಾಡುತ್ತಿದ್ದ ಈ ಶಕ್ತಿಗಳಿಗೆ ಇನ್ನು ಮುಂದೆ ಅಪಪ್ರಚಾರಕ್ಕೆ ಅವಕಾಶವಿಲ್ಲದಂತಾಗಿದೆ. ಇದರಿಂದ ಅವರು ನಿರಾಶರಾಗಿದ್ದಾರೆ. ಅದರ ಪರಿಣಾಮವಾಗಿ ಅವರ ವಿವೇಚನಾ ಶಕ್ತಿಯೇ ಮಾಯವಾದಂತಿದೆ.

ಕೆಲವು ಬಂಡವಾಳಶಾಹಿ ಪತ್ರಿಕೆಗಳು ಈ ಹೊಸ ಧೋರಣೆಯ ಮಹತ್ವವನ್ನರಿತು ಕಾಂಗ್ರೆಸ್ಸಿಗೆ ಎಚ್ಚರಿಕೆ ಕೊಟ್ಟಿವೆ. ಹಿರಿ ಬಂಡವಾಳಶಾಹಿ ಬಿರ್ಲಾನ ಮುಖಪತ್ರವಾದ "ಈಸ್ಟರ್ನ್ ಇಕೊನೊಮಿಸ್ಟ್" ಪತ್ರಿಕೆಯು ತನ್ನ ಏಪ್ರಿಲ್ 18ನೆಯ ಸಂಚಿಕೆಯಲ್ಲಿ ಅಮೃತಸರ ಅಧಿವೇಶನದ ಬಗ್ಗೆ ಸಂಪಾದಕೀಯವನ್ನು ಬರೆದು "ಕಮ್ಯೂನಿಸ್ಟ್ ಪಾರ್ಟಿಯ ಈ ಸವಾಲನ್ನು ಪ್ರಜಾಪ್ರಭುತ್ವವಾದಿಗಳು ಗಮನಿಸದಿದ್ದರೆ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ತಂತ್ರದಲ್ಲಾದ ಬದಲಾವಣೆಯನ್ನು ಕಮ್ಯೂನಿಸ್ಟ್ ತತ್ವದ ಬದಲಾವಣೆಯೆಂದು ತಪ್ಪು ತಿಳಿದುಕೊಂಡರೆ ತುಂಬಾ ಅಪಾಯಕರ"ವೆಂದು ಎಚ್ಚರಿಸಿದೆ. ಈ ಪ್ರತಿಕ್ರಿಯೆಯಲ್ಲಿ ಆಶ್ಚರ್ಯವೇನಿಲ್ಲ. ಕಮ್ಯೂನಿಸ್ಟ್ ಪಾರ್ಟಿಯ ಬೆಳವಣಿಗೆಯನ್ನು ಬಂಡವಾಳಶಾಹಿ ಎಂದಾದರೂ ಸಹಿಸೀತೇ ?

ಆದರೆ ಕಾಂಗ್ರೆಸ್ ಪುಢಾರಿಗಳ ಪ್ರತಿಕ್ರಿಯೆ ಬಹಳ ವಿಚಿತ್ರವಾಗಿದೆ. "ಶಾಂತಿಯುತ ಸಾಧನೆ ಮತ್ತು ಮಾರ್ಕ್ಸ್‌ವಾದ ಎಂದೂ ಸರಿಹೊಂದಲಾರವೆಂದು" ಶ್ರೀ ದೇಬರಭಾಯಿಯವರು ಅಮೃತವಾಣಿ ನುಡಿದಿದ್ದಾರೆ. ಶ್ರೀಮನ್ನಾರಾಯಣ್, ಮೊರಾರ್ಜಿ ದೇಸಾಯಿ, ಪಂತ್ ಮುಂತಾದವರೂ ಹೆಚ್ಚು ಕಡಿಮೆ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನೆಹರೂರವರೂ ಅಡ್ಡಗೋಡೆಯ ಮೇಲೆ ದೀಪ ಇಟ್ಟಹಾಗೆ ಮಾತಾಡಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯು ಹಿಂಸೆ ಮತ್ತು ಅಂತರ್ಯುದ್ಧವನ್ನು ಪ್ರಚೋದಿಸುವ ಪಕ್ಷವೆಂದು ಸದಾ ಅಪಪ್ರಚಾರ ಮಾಡುತ್ತಿದ್ದ ಈ ಪ್ರಭೃತಿಗಳಿಗೆ ಅಮೃತಸರದ ನಿರ್ಣಯವಾದರೂ ಹೇಗೆ ಹಿಡಿಸೀತು ! ಒಂದು ಕಡೆ ಕಾಂಗ್ರೆಸ್ ಒಳಜಗಳಗಳಿಂದ ಬಲಹೀನವಾಗುತ್ತಿದ್ದು ಇನ್ನೊಂದು ಕಡೆ ಕಮ್ಯೂನಿಸ್ಟ್ ಪಾರ್ಟಿಯು ಬಲಗೊಳ್ಳುತ್ತಿರುವುದನ್ನು ಎಲ್ಲರೂ ಮಾನ್ಯ ಮಾಡಿದ್ದಾರೆ. ಮೊನ್ನೆ ಮಾಡಿದ ನಿರ್ಣಯದಿಂದ ಪಾರ್ಟಿ ಇನ್ನೂ ಬಲಗೊಳ್ಳುವುದೆಂದು ಅವರಿಗೆ ಗೊತ್ತು. ಇದರಿಂದ ಅವರು ಘಾಬರಿಯಾಗಿ ಈ ನಿರ್ಣಯಗಳು ಮಾರ್ಕ್ಸ್ ಸಿದ್ಧಾಂತಕ್ಕೆ ವಿರೋಧವಾದುವೆಂದು ಪ್ರಲಾಪವೆತ್ತಿದ್ದಾರೆ.

ಮಾರ್ಕ್ಸ್ ಸಿದ್ಧಾಂತದ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯು ಧೇಬರ್‌ರವರಿಂದೇನೂ ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ. ಆದ್ದರಿಂದ ಅವರ ಈ ಟೀಕೆಗೆ ಹೆಚ್ಚು ಮಹತ್ವ ಕೊಡಬೇಕಾಗಿಲ್ಲದಿದ್ದರೂ ಕಾಂಗ್ರೆಸ್ ಅಧ್ಯಕ್ಷಸ್ಥಾನದಿಂದ ಅವರು ಈ ರೀತಿ ಹೇಳಿರುವುದರ ಬಗ್ಗೆ ವಿಚಾರಮಾಡಿ ತುಲನೆ ಮಾಡುವುದು ಅಗತ್ಯ. ಕಾಂಗ್ರೆಸ್ ಇತರ ಹಿರಿಯ ನಾಯಕರೂ ಇದೇ ತರನಾಗಿ ಹೇಳಿದ್ದರಿಂದ ಅವರ ಆರೋಪದಲ್ಲಿ ಏನಾದರೂ ನಿಜಾಂಶವಿದೆಯೇ ಎಂದು ನೋಡಬೇಕಾಗಿದೆ.

ಶಾಂತಿಯುತವಾಗಿ ಸಮಾಜವಾದ ಸ್ಥಾಪಿಸಬಹುದೆಂದು ನಾವು ಹೇಳಿರುವುದು ಹೊಸದೇನಲ್ಲ. ಕೆಲವು ರಾಷ್ಟ್ರಗಳಲ್ಲಿ ಶಾಂತಿಯುತವಾಗಿ ಸಮಾಜವಾದ ಸ್ಥಾಪಿಸಬಹುದೆಂದು 86 ವರ್ಷಗಳ ಹಿಂದೆಯೇ ಕಾರ್ಲ್ ಮಾರ್ಕ್ಸ್ ನುಡಿದಿರುತ್ತಾರೆ. ಯೂರೋಪ್ ದೇಶಗಳಲ್ಲಿ ಸಮಾಜವಾದ ಸ್ಥಾಪನೆಯಾಗಬೇಕಾದರೆ "ಅಧಿಕಾರಿಶಾಹಿ-ಮಿಲಿಟರಿ ಶಕ್ತಿಗಳನ್ನು ನಾಶಗೊಳಿಸುವುದರಿಂದಲೇ ಸಾಧ್ಯ"ವೆಂದು ಹೇಳಿದ್ದರೂ ಬ್ರಿಟನ್ ಮತ್ತು ಸಾಗರೋತ್ತರ ರಾಷ್ಟ್ರಗಳ ಬಗ್ಗೆ ಹೇಳುತ್ತಾ ಈ ದೇಶಗಳಲ್ಲಿ ಕಾರ್ಮಿಕ ವರ್ಗ, ಪಾರ್ಲಿಮೆಂಟರೀ ಬಹುಮತಗಳಿಸಿ ಅಧಿಕಾರಕ್ಕೆ ಬರಲು ಸಾಧ್ಯವೆಂದಿದ್ದಾರೆ. "ಒಂದೇ ರೀತಿಯ ಸಾಧನೆಗಳಿಂದ ನಾವು ಈ ಗುರಿ ಮುಟ್ಟುತ್ತೇವೆಂದು ನಾವೇನೂ ಹೇಳಿಲ್ಲ. ಬೇರೆ ಬೇರೆ ದೇಶಗಳ ಸಂಸ್ಥೆಗಳು, ಪದ್ಧತಿಗಳು ಮತ್ತು ಪರಂಪರೆಗಳನ್ನು ಗಮನಿಸುವುದಗತ್ಯ ; ಅಮೆರಿಕಾ ಮತ್ತು ಬ್ರಿಟನ್–ನಿಮ್ಮಲ್ಲಿರುವ ಪರಿಸ್ಥಿತಿಯನ್ನು ಸಹ ಹೆಚ್ಚು ತಿಳಿದಿದ್ದರೆ ಹೊಲ್ಲೆಂಡ್‌ನ್ನು ಸಹ ಸೇರಿಸುವೆ—ಮುಂತಾದ ದೇಶಗಳಲ್ಲಿ ಕಾರ್ಮಿಕ ವರ್ಗ ಶಾಂತಿಯುತವಾಗಿ ಗುರಿ ಸಾಧಿಸಬಹುದೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ" ವೆಂದು 1872 ರಲ್ಲಿ ಹೊಲ್ಲೆಂಡ್ ದೇಶದ ಆಮ್‌ಸ್ಟರಡಾಂನಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದಾರೆ.

ಆದರೆ ಕ್ರಮೇಣ ಪರಿಸ್ಥಿತಿ ಬದಲಾವಣೆಯಾಯಿತು. ಗುತ್ತೇದಾರಿ ಬಂಡವಾಳಶಾಹಿಯ ಬೆಳವಣಿಗೆಯ ಪರಿಣಾಮವಾಗಿ ಪೋಲೀಸ್-ಅಧಿಕಾರಿಶಾಹಿ ಯಂತ್ರಗಳು ಬ್ರಿಟನ್ ಮತ್ತಿತರ ದೇಶಗಳಲ್ಲೂ ಬೆಳೆದು ಬಂದುವು.

ಫೆಬ್ರವರಿ, 1917 ರಲ್ಲಿ ರಷ್ಯದಲ್ಲಿ ಪ್ರಥಮ ಕ್ರಾಂತಿಯಾದಾಗಿನಿಂದ ಕಾರ್ಮಿಕರಿಗೆ ಹಿಂದೆಂದೂ ಇಲ್ಲದ ನಾಗರಿಕ ಹಕ್ಕುಗಳು ದೊರೆತಾಗ ಲೆನಿನ್‌ರವರು ತಮ್ಮ "ಏಪ್ರಿಲ್ ಥೀಸಿಸ್"ವೆಂಬ ಲೇಖನದಲ್ಲಿ ಸೋವಿಯತ್‌ಗಳಲ್ಲಿ ಬಹುಮತ ಪಡೆಯುವುದರ ಮೂಲಕ ಶಾಂತಿಯುತವಾಗಿ ಸಮಾಜವಾದಿ ಕ್ರಾಂತಿಯನ್ನು ಸಾಧಿಸಬಹುದೆಂದು ತಿಳಿಸಿದರು. ಆದರೆ ಈ ಪರಿಸ್ಥಿತಿ ಹೆಚ್ಚು ದಿವಸ ಮುಂದರಿಯದೆ ಜುಲೈ 1917ರಲ್ಲಿ ರಷ್ಯದ ತಾತ್ಕಾಲಿಕ ಸರಕಾರ ದಬ್ಬಾಳಿಕೆಯನ್ನಾರಂಭಿಸಿ, ಶಾಂತರೀತಿಯಿಂದ ಪ್ರದರ್ಶನ ನಡೆಸುತ್ತಿದ್ದ ಕಾರ್ಮಿಕರ ಮೇಲೆ ಗೋಲಿಬಾರು ಮಾಡಲಾರಂಭಿಸಿತು. ಆಗ ಶಾಂತಿಯುತ ಧೋರಣೆಯನ್ನು ಬದಲಾಯಿಸಬೇಕಾಗಿ ಬಂತು.

ಅಕ್ಟೋಬರ ಮಹಾ ಕ್ರಾಂತಿಯ ನಂತರವೂ ಬೊಲ್ಷೆವಿಕರು ಅಂತರ್ಯುದ್ಧಕ್ಕೆ ಕರೆ ಕೊಡಲಿಲ್ಲ. ಶಾಂತಿಯುತ ಧೋರಣೆಯನ್ನೇ ಅವರು ಬಯಸಿದ್ದರು. ಆದರೆ ಸಾಮ್ರಾಜ್ಯಶಾಹಿಗಳು ಪ್ರವೇಶಿಸಿ ಅಕ್ರಮಣಕಾರಿ ಯುದ್ಧ ಆರಂಭಿಸಿದ್ದರಿಂದಲೂ, ಮರು ಕ್ರಾಂತಿಗ ಪ್ರಯತ್ನ ನಡೆಸಿದ್ದರಿಂದಲೂ ಪಾರ್ಟಿಯು ಹೋರಾಡಬೇಕಾಯಿತು. ಕಮ್ಯೂನಿಸ್ಟ್ ಪಾರ್ಟಿಯು ಹಿಂಸೆಯಿಂದಲೇ ಕ್ರಾಂತಿ ಸಾಧ್ಯವೆಂಬುದನ್ನು ಮೊದಲಿಂದಲೂ ಹೇಳಿಕೊಂಡು ಬರಲಿಲ್ಲ. ಪರಿಸ್ಥಿತಿಗೆ ತಕ್ಕಂತೆ ಘೋಷಣೆ ಕೊಡಲಾಗುತ್ತಿತ್ತು.

ಲೆನಿನ್‌ರವರ ನಂತರ ವಿಶ್ವದ ಪರಿಸ್ಥಿತಿ ಮೂಲಭೂತವಾಗಿ ಬದಲಾವಣೆಯಾಗಿದೆ. ಈಗ ಒಂದೇ ಸಮಾಜವಾದಿ ರಾಷ್ಟ್ರವಿರುವುದಿಲ್ಲ. ಸಮಾಜವಾದವೆಂಬುದು ಒಂದು ಪ್ರಪಂಚ ಪದ್ಧತಿಯೇ ಆಗಿದೆ ಮತ್ತು ಈ ಕಾಲಘಟ್ಟ ಬಂಡವಾಳಶಾಹಿ ಪದ್ಧತಿಯಿಂದ ಸಮಾಜವಾದಕ್ಕೆ ಬದಲಾವಣೆಯಾಗುವ ಕಾಲವಾಗಿದೆ. ವಸಾಹತು ಪದ್ಧತಿ ಒಡೆದು ಹೋಗುತ್ತಿದ್ದು ಅನೇಕ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದು ಪ್ರಪಂಚದ ವ್ಯವಹಾರದಲ್ಲಿ ತಮ್ಮದೇ ಆದ ಒಂದು ಸ್ವತಂತ್ರ ಧೋರಣೆಯನ್ನನುಸರಿಸುತ್ತಿವೆ. ವಿಶ್ವಶಾಂತಿ ಶಕ್ತಿಗಳು ಬಲವಾಗಿ ಬೆಳೆದು ಸಾಮ್ರಾಜ್ಯಶಾಹಿಗಳು ಹಿಂದಿನಂತೆ ಯುದ್ಧ ಪ್ರಚೋದಿಸಲು ಸಾಧ್ಯವಿಲ್ಲದಾಗಿದೆ. ಈಜಿಪ್ಟ್ ಮತ್ತು ಸಿರಿಯಾದ ಪ್ರಕರಣಗಳಿಂದ ಇದು ಸ್ಪಷ್ಟವಾಗುತ್ತದೆ.

ಈ ಪರಿಸ್ಥಿತಿಯಲ್ಲಿ ಬೇರೆ ಬೇರೆ ದೇಶಗಳು ಶಾಂತಿಯುತವಾಗಿ ಸಮಾಜವಾದ ಸ್ಥಾಪಿಸಲು ಸಾಧ್ಯವಾಗಿದೆ. ಈ ರಾಷ್ಟ್ರಗಳ ವರ್ಗಸಂಬಂಧಗಳಿಂದಲೂ, ಹೊಸ ಪರಿಸ್ಥಿಯ ಪರಿಣಾಮವಾಗಿ ಒದಗಿರುವ ನಾಗರಿಕ ಹಕ್ಕುಗಳು ಮತ್ತು ಜನತೆಯ ನವಜಾಗೃತಿಯಿಂದಲೂ ಈಗ ಕಾರ್ಮಿಕ ವರ್ಗ ರೈತ ವರ್ಗದ ಜೊತೆಗೆ ತನ್ನ ನಾಯಕತ್ವದಲ್ಲಿ ಬಹುಸಂಖ್ಯಾತ ಜನತೆಯನ್ನು ಒಂದುಗೂಡಿಸಿ ಶಾಂತಿಯುತವಾಗಿಯೇ ಈಗಿನ ಪಾರ್ಲಿಮೆಂಟರಿ ಸಂಸ್ಥೆಗಳನ್ನುಪಯೋಗಿಸಿ ಅಧಿಕಾರಕ್ಕೆ ಬರಲು ಸಾಧ್ಯತೆ ಇರುತ್ತದೆ.

ಈ ಸಾಧ್ಯತೆಯನ್ನೇ ಅಮೃತಸರದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಗಮನಕ್ಕೆ ತೆಗೆದುಕೊಂಡಿರುವುದು. ಮಾರ್ಕ್ಸ್ ಸಿದ್ಧಾಂತವನ್ನು ಈಗಿನ ಪರಿಸ್ಥಿತಿಗೆ ಇಲ್ಲಿ ಅನ್ವಯಿಸಲಾಗಿದೆಂದು ತಿಳಿಯಲು ಹೆಚ್ಚು ಕಷ್ಟವೇನಿಲ್ಲ. ಆದರೆ ಕೆಲವರು ಮಾರ್ಕ್ಸ್ ಒಂದು ಸಂದರ್ಭದಲ್ಲಿ ಹೇಳಿರುವ ಮಾತುಗಳನ್ನೇ ಹಿಡಿದು ನಮ್ಮನ್ನು ಟೀಕಿಸುತ್ತಾರೆ. ಅಂಥವರಿಗೆ ಮಾರ್ಕ್ಸ್‌ವಾದವೆಂಬುದೊಂದು ಜಡವಾದವಾಗಿರುವುದೆಂದು ಹೇಳುವ ಅವರಿಗೆ ಈ ತೀರ್ಮಾನವನ್ನು ತಿಳಿಯಲು ಕಷ್ಟವಾದೀತು. ನಮ್ಮನ್ನು ಟೀಕೆ ಮಾಡಿದ ಶ್ರೀ ಧೇಬರ್‌ರವರು ಮಾರ್ಕ್ಸ್‌ವಾದದ ಬಗ್ಗೆ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿ ಮತ್ತು ಯೋಜನೆ

ಚುನಾವಣಾ ಘೋಷಣೆಯಲ್ಲಿ ಕಮ್ಯೂನಿಸ್ಟರು ದ್ವಿತೀಯ ಯೋಜನೆಯನ್ನು ಟೀಕಿಸಿದ್ದರೂ ಈಗ ಅದಕ್ಕೆ ಬೆಂಬಲ ನೀಡಿರುವುದು ಸಂದರ್ಭ ಸಾಧಕತನವೆಂದು ಧೇಬರ್ ಆರೋಪಿಸಿದ್ದಾರೆ. ಇದರಲ್ಲೂ ಧೇಬರ್‌ರವರು ದಾರಿ ತಪ್ಪಿದ್ದಾರೆಂದು ಹೇಳಬೇಕಾಗಿದೆ. ಏಪ್ರಿಲ್ 1956 ರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಪಾಲಘಾಟ್ ನಿರ್ಣಯದಲ್ಲೇ ಯೋಜನೆಯ ಒಳ್ಳೆಯ ಅಂಶಗಳನ್ನು ಸ್ವಾಗತಿಸಿರುವುದಲ್ಲದೆ ಅದು ಕಾರ್ಯಗತವಾಗಬೇಕೆಂದು ಹೇಳಿರುವುದು ಧೇಬರ್ ಅವರಿಗೆ ಜ್ಞಾಪಿಸಿಕೊಡುತ್ತೇವೆ. ಅದನ್ನು ಅವರು ಬೇಕಾದರೆ ನೋಡಬಹುದು. ನಮ್ಮ ಚುನಾವಣಾ ಘೋಷಣೆಯಲ್ಲೂ "ದೇಶಕ್ಕೆ ಹಿತವಾಗುವ ಯೋಜನೆಯ ಅಂಶಗಳನ್ನು ಕಾರ್ಯಗತಗೊಳಿಸಲು ಹೋರಾಡುವೆವು" ಎಂದು ಹೇಳಿರುವುದು ಧೇಬರ್‌ರವರ ಗಮನಕ್ಕೆ ಯಾಕೆ ಬಂದಿಲ್ಲ? ಅಮೃತಸರದ ರಾಜಕೀಯ ನಿರ್ಣಯದಲ್ಲೂ ಈ ಅಂಶವನ್ನೇ ಒತ್ತಿಹೇಳಲಾಗಿದೆ. ಧೇಬರ್ ಭಾಯಿಯವರ ಟೀ

([illegible]ನೇ ಪುಟ ನೋಡಿ)

ನಮ್ಮ ಮೊದಲ ದಿನಗಳು

ಮುಜಫರ್ ಅಹಮದ್

ಕಾರ್ಮಿಕ ಮತ್ತು ರೈತ ಪಕ್ಷ

(ಕಳೆದ ಸಂಚಿಕೆಯಿಂದ)

ಕಾರ್ಮಿಕ ಮತ್ತು ರೈತ ಪಕ್ಷವನ್ನು ಕುರಿತು ಸ್ವಲ್ಪ ಹೇಳುವುದು ಅಗತ್ಯವಾಗಿದೆ. 1923ರಲ್ಲಿ ನನ್ನ ಬಂಧನವಾದ ಮೇಲೆ 1926ರ ಜನವರಿ 2ರಂದು ನಾನು ಕಲ್ಕತ್ತೆಗೆ ಹಿಂದಿರುಗಿದೆ. ನಾನು ಹಿಂದಿರುಗುವುದಕ್ಕೆ ಮುಂಚೆ ಕಲ್ಕತ್ತದಲ್ಲಿ ಒಂದು ಪಕ್ಷವು ಸ್ಥಾಪಿತವಾಗಿತ್ತು. ಅದು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಲೇಬರ್ ಸ್ವರಾಜ್ ಪಕ್ಷವೆಂದು ಹೆಸರು ಗಳಿಸಿತ್ತು. ಈ ಪಕ್ಷವು **ಲಂಗಾಲ್** ಎಂಬ ಹೆಸರಿನ ವಾರಪತ್ರಿಕೆಯನ್ನು ಹೊರಡಿಸುತ್ತಿತ್ತು. ನಜ್ರೂಲ್ ಇಸ್ಲಾಂರವರ ಪ್ರಖ್ಯಾತ ಕವನ "ಸಾಮ್ಯವಾದಿ" ಈ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಈ ಕವನವು ರಷ್ಯನ್ ಭಾಷೆಗೂ ತರ್ಜುಮೆಯಾಗಿದೆಯೆಂದು ಕೇಳಿದ್ದೇನೆ, ಆದರೆ ನಾನು ಅದನ್ನು ನೋಡಿಲ್ಲ. ಲೇಬರ್ ಸ್ವರಾಜ್ ಪಕ್ಷವು ನಾಲ್ವರು ಗೆಳೆಯರ ಉತ್ಸಾಹದಿಂದ ಸ್ಥಾಪಿತವಾಯಿತು. ಈ ಹಿಂದೆಯೇ ನಾನು ಇಬ್ಬರು ಗೆಳೆಯರ ಹೆಸರನ್ನು ತಿಳಿಸಿದ್ದೇನೆ. ಉಳಿದ ಇಬ್ಬರ ಹೆಸರು ಹೇಮಂತ್ ಕುಮಾರ್ ಸರ್ಕಾರ್ ಮತ್ತು ಶಂಸುದ್ದೀನ್ ಹುಸೇನ್. ಎರಡನೆಯವರು ಕಾಮ್ರೇಡ್ ಅಬ್ದುಲ್ ಹಾಲಿಮ್‌ರವರ ದೊಡ್ಡ ಸಹೋದರರಾಗಿದ್ದರು. ಇಂದು ಆ ನಾಲ್ವರಲ್ಲಿ ನಜ್ರೂಲ್ ಇಸ್ಲಾಂರವರ ಹೊರತು ಉಳಿದವರು ತೀರಿಕೊಂಡಿದ್ದಾರೆ. ಆದರೆ ನಜ್ರೂಲ್‌ರವರು ಬದುಕಿದ್ದರೂ ಮೆದುಳಿನ ಪಾರ್ಶ್ವವಾಯುವಿನ ಜಾಡ್ಯದಿಂದಾಗಿ ಸತ್ತಂತೆಯೇ ಇದ್ದಾರೆ.

1926ರ ಫೆಬ್ರುವರಿ ತಿಂಗಳಲ್ಲಿ ಕೃಷ್ಣನಗರ (ನಾದಿಯಾ)ದಲ್ಲಿ ರೈತರ ಸಮ್ಮೇಳನವೊಂದು ಜರುಗಿತು. ಈ ಸಮ್ಮೇಳನದಲ್ಲಿ ಲೇಬರ್ ಸ್ವರಾಜ್ ಪಕ್ಷದ ಹೆಸರನ್ನು ರೈತ ಮತ್ತು ಕಾರ್ಮಿಕ ಪಕ್ಷವೆಂದು ಬದಲಿಸಲಾಯಿತು. ಅಂದರೆ ಪಕ್ಷವು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಆಶ್ರಯವನ್ನು ತ್ಯಜಿಸಿತು ಎಂದರ್ಥ. ಕೃಷ್ಣನಗರದ ಸಮ್ಮೇಳನದಲ್ಲಿ ರೈತ ಪ್ರತಿನಿಧಿಗಳು ಹೆಚ್ಚು ಸಂಖ್ಯೆಯಲ್ಲಿದ್ದುದರಿಂದ, "ಕಾರ್ಮಿಕ" ಎನ್ನುವ ಪದವನ್ನು ಪಕ್ಷದ ಹೆಸರಿನ ಆರಂಭದಲ್ಲಿ ಸೇರಿಸಲಾಗಲಿಲ್ಲ. ಆದರೆ, ಇನ್ನೊಂದು ಸಮ್ಮೇಳನದಲ್ಲಿ ನಾವು ಅದರ ಹೆಸರನ್ನು ಕಾರ್ಮಿಕ ಮತ್ತು ರೈತ ಪಕ್ಷವೆಂದು ಬದಲಾಯಿಸಿದೆವು. ನಿಧಾನವಾಗಿ ನಾನು ಪಕ್ಷದ ಪತ್ರಿಕೆಯಾದ **ಲಂಗಾಲ್** ಅನ್ನು ಸಂಪಾದಿಸುವುದರಲ್ಲಿ ತೊಡಗಿದೆ. ಈ ವೇಳೆ ಪತ್ರಿಕೆಯ ಹೆಸರನ್ನು **ಘನವಾಣಿ** ಎಂದು ಬದಲಿಸಲಾಯಿತು. ಭಾರತ ಕಮ್ಯೂನಿಸ್ಟ್ ಪಕ್ಷವು ಇನ್ನೂ ನ್ಯಾಯಬಾಹಿರವಾಗಿರದಿದ್ದರೂ ಅದರ ಹೆಸರಿನಲ್ಲಿ ಬಹಿರಂಗವಾಗಿ ಕೆಲಸ ಮಾಡುವುದು ಕಷ್ಟವಾಗಿತ್ತು. ಕಮ್ಯೂನಿಸ್ಟ್ ಪಾರ್ಟಿಯಲ್ಲಿ ನಾವು ಏನು ತೀರ್ಮಾನಗಳನ್ನು ಮಾಡುತ್ತಿದ್ದೆವೋ ಅವನ್ನು ಕಾರ್ಮಿಕ ಮತ್ತು ರೈತ ಪಕ್ಷದ ವೇದಿಕೆಯಿಂದ ಕಾರ್ಯಗತ ಮಾಡುತ್ತಿದ್ದೆವು. ಈ ಪಕ್ಷದ ಎಲ್ಲ ಹಸ್ತ ಪ್ರತಿಗಳನ್ನೂ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಸಿದ್ಧಗೊಳಿಸುತ್ತಿತ್ತು. ಬಂಗಾಳದಲ್ಲಿ ಕಾರ್ಮಿಕ ಮತ್ತು ರೈತ ಪಕ್ಷದಲ್ಲಿ ಕಮ್ಯೂನಿಸ್ಟೇತರರು ಹೆಚ್ಚಾಗಿದ್ದರು. ಆದರೆ ಈ ಕಾರಣದಿಂದ ನಮ್ಮ ಕೆಲಸಕ್ಕೆ ಅಡ್ಡಿಯಾಗಲಿಲ್ಲ.

1927ರ ಆರಂಭದಲ್ಲಿ ಕಾರ್ಮಿಕ ಮತ್ತು ರೈತ ಪಕ್ಷವು ಮುಂಬಯಿಯಲ್ಲಿಯೂ ಸ್ಥಾಪಿತವಾಯಿತು. ಕಾಮ್ರೇಡ್ ಎಸ್. ಎಸ್. ಮಿರಜ್‌ಕರ್ ಈ ಪಕ್ಷದ ಕಾರ್ಯದರ್ಶಿಯಾಗಿದ್ದರು. ಆ ವರ್ಷ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ನಮಗೆ ಮೊದಲಬಾರಿಗೆ ಪಂಜಾಬಿನ ಕಾಮ್ರೇಡ್ ಸೋಹನ್‌ಸಿಂಗ್ ಜೋಷ್ ಮತ್ತು ಭಾಗ್‌ಸಿಂಗ್ ಕನಾಡಿಯಾನ್‌ರವರ ಪರಿಚಯವಾಯಿತು. ಆಗ ಸೋಹನ್‌ಸಿಂಗ್ ಜೋಷ್ **ಕೀರ್ತಿ** ಎಂಬ ಮಾಸಪತ್ರಿಕೆ ಹೊರಡಿಸುತ್ತಿದ್ದರು. ಕೀರ್ತಿ ಪಂಜಾಬಿ ಭಾಷೆಯಲ್ಲಿ ಗುರುಮುಖಿ ಲಿಪಿಯಲ್ಲಿ ಪ್ರಕಟವಾಗುತ್ತಿತ್ತು. ಮಾಸ್ಕೋದಲ್ಲಿದ್ದ ಪೂರ್ವದೇಶಗಳ ದುಡಿಯುವ ಜನರ ವಿಶ್ವವಿದ್ಯಾನಿಲಯದಿಂದ ಹಿಂತಿರುಗಿದ್ದ ಕಾಮ್ರೇಡ್ ಸಂತೋಖ್‌ಸಿಂಗ್‌ರವರು ಈ ಪತ್ರಿಕೆಯ ಸಂಸ್ಥಾಪಕರಾಗಿದ್ದರು. ಅವರು ಕ್ಷಯರೋಗದಿಂದ ನರಳುತಿದ್ದು, ನಂತರ ಅದರಿಂದಲೇ ಮರಣ ಹೊಂದಿದರು. ನಮಗೆ ಅವರ ಪರಿಚಯವಾಗಲೀ ಅಥವಾ ಕಾಮ್ರೇಡ್ ಅಬ್ದುಲ್ ಮಜೀದರ ಪರಿಚಯವಾಗಲೀ ಇರಲಿಲ್ಲ. 1924ರಲ್ಲಿ ಕಾರಾಗೃಹದಿಂದ ಬಿಡುಗಡೆಯಾದನಂತರ ಅವರು ಲಾಹೋರಿನಲ್ಲಿ ಕೆಲಸ ಆರಂಭಿಸಿದರು. ಪಂಜಾಬಿನಲ್ಲಿ ಪ್ರಖ್ಯಾತವಾಗಿರುವ ನವ್‌ಜವಾನ್ ಭಾರತ್ ಸಭಾವನ್ನು ಸ್ಥಾಪಿಸಿದ ಕೆಲವರಲ್ಲಿ ಕಾಮ್ರೇಡ್ ಅಬ್ದುಲ್ ಮಜೀದ್ ಒಬ್ಬರಾಗಿದ್ದರು. ಆದರೂ ನಾವು ಕಾಮ್ರೇಡ್ ಸೋಹನ್ ಸಿಂಗ್‌ರೊಂದಿಗೆ ಚರ್ಚೆ ಮಾಡಿದೆವು. ಈ ಚರ್ಚೆಯ ಫಲವಾಗಿ 1927ರಲ್ಲಿ ಪಂಜಾಬಿನಲ್ಲಿ ಕೀರ್ತಿ—ಕಿಸಾನ್ ಪಕ್ಷ ಸ್ಥಾಪನೆಯಾಯಿತು. ಪಂಜಾಬಿನಲ್ಲೂ ಟ್ರೇಡ್ ಯೂನಿಯನ್ ಚಟುವಟಿಕೆ ವಿಸ್ತಾರಗೊಳ್ಳುತ್ತಿತ್ತು.

1928ರ ಅಕ್ಟೋಬರ್‌ನಲ್ಲಿ (?) ಫಿಲಿಪ್ ಸ್ಪ್ರಾಟ್ ಮತ್ತು ನಾನು ಸಮ್ಮೇಳನವೊಂದರಲ್ಲಿ ಭಾಗವಹಿಸಲು ಮೀರತ್‌ಗೆ ಹೋದೆವು. ಕಾಮ್ರೇಡ್ ಅಬ್ದುಲ್ ಮಜೀದ್, ಸೋಹನ್ ಸಿಂಗ್ ಜೋಷ್ ಮತ್ತು ಪೂರಣ್ ಚಂದ್ರ ಜೋಷಿ (ಪಿ. ಸಿ. ಜೋಷಿ)ಯವರೂ ಈ ಸಮ್ಮೇಳನಕ್ಕೆ ಬಂದಿದ್ದರು. ಕಾಮ್ರೇಡ್ ಜೋಷಿ ಆಗ ಎಂ. ಎ. ಮುಗಿಸಿಕೊಂಡು ಅಲಹಾಬಾದ್ ಲಾ ಕಾಲೇಜಿನಲ್ಲಿ ಓದುತ್ತಿದ್ದರು. ಪತ್ರವ್ಯವಹಾರದ ಮೂಲಕ ನನಗೆ ಅವರ ಪರಿಚಯವಿತ್ತು. ನಾನು ಅವರನ್ನು ಭೆಟ್ಟಿಯಾಗಿದ್ದದು ಅದೇ ಮೊದಲು. ಮೀರತ್ ಸಮ್ಮೇಳನದಲ್ಲಿ ಉತ್ತರ ಪ್ರದೇಶದಲ್ಲಿಯೂ ಸಹ ಕಾರ್ಮಿಕ ಮತ್ತು ರೈತ ಪಕ್ಷ ಸ್ಥಾಪನೆಯಾಯಿತು ಪಿ. ಸಿ. ಜೋಷಿ ಪಕ್ಷದ ಕಾರ್ಯದರ್ಶಿಯಾದರು.

ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಎಲ್ಲ ಕಾರ್ಮಿಕ ಮತ್ತು ರೈತ ಪಕ್ಷಗಳ ಅಖಿಲ ಭಾರತ ಸಮ್ಮೇಳನವೊಂದನ್ನು ಕಲ್ಕತ್ತೆಯಲ್ಲಿ ಕರೆದು, ಎಲ್ಲವನ್ನೂ ಒಂದುಗೂಡಿಸಿ, ಅಖಿಲ ಭಾತರ ಕಾರ್ಮಿಕ—ರೈತ ಪಕ್ಷವನ್ನು ರಚಿಸಬೇಕೆಂದು ನಾವು ಮುಂಚೆಯೇ ತೀರ್ಮಾನಿಸಿದ್ದೆವು. ಅದರಂತೆ ಈ ಸಮ್ಮೇಳನವನ್ನು ಕೂಡಿಸಿ, ಅಖಿಲ ಭಾರತ ಕಾರ್ಮಿಕ ಮತ್ತು ರೈತ ಪಕ್ಷವನ್ನು ರಚಿಸಲಾಯಿತು. ಕಾಮ್ರೇಡ್ ಸೋಹನ್ ಸಿಂಗ್ ಜೋಷ್ ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ಸಮ್ಮೇಳನದ ಸಮಯದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಎರಡು ಸಭೆಗಳು ನಡೆದುವು. ಒಂದು ಸಭೆಯು ಸಮ್ಮೇಳನ ನಡೆಯುತ್ತಿದ್ದಾಗಲೂ ಇನ್ನೊಂದು ಸಮ್ಮೇಳನದ ಕೊನೆಯಲ್ಲಿ 1929ರ ಜನವರಿಯ ಆರಂಭದಲ್ಲಿ ನಡೆಯಿತು. ಹಿಂದಿನ ಸಭೆಯಲ್ಲಿ ನನ್ನ ಶಿಫಾರಸಿನ ಮೇಲೆ ಕಾಮ್ರೇಡ್ ಪಿ. ಸಿ. ಜೋಷಿ ಮತ್ತು ಸೋಹನ್ ಸಿಂಗ್, ಜೋಷ್‌ರವರನ್ನು ಭಾರತ ಕಮ್ಯೂನಿಸ್ಟ್ ಪಕ್ಷಕ್ಕೆ ತೆಗೆದುಕೊಳ್ಳಲಾಯಿತು. ಅಧಿಕೃತವಾಗಿ ಕಾಮ್ರೇಡ್ ಸೋಹನ್ ಸಿಂಗ್ ಜೋಷ್ ಪಂಜಾಬಿ ಸಿಖ್ ಪಂಗಡದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಮೊದಲನೆಯ ಸದಸ್ಯರಾಗಿದ್ದರು. ಆದರೆ ನಾವು ಕಾಮ್ರೇಡ್ ಸಂತೋಖ್ ಸಿಂಗ್‌ರವರನ್ನು ಪಾರ್ಟಿ ಸದಸ್ಯರಾಗಿ ತೆಗೆದುಕೊಂಡರೆ ಆಗ ಅವರು ಎರಡನೆಯವರಾಗುತ್ತಾರೆ. ಕಾಮ್ರೇಡ್ ಪಿ. ಸಿ. ಜೋಷಿಯವರ ಹೆಸರನ್ನೂ ಎಲ್ಲಿಯೂ ಬರೆದಿರಿಸಕೂಡದೆಂದು ತೀರ್ಮಾನಿಸಲಾಯಿತು. 1927—28ರಲ್ಲಿ, ಅದರಲ್ಲೂ 1928ರ ಕಾರ್ಮಿಕ ಹೋರಾಟಗಳ ನಂತರದಲ್ಲಿ, ದಬ್ಬಾಳಿಕೆ ಬರುವ ಅಪಾಯವಿದೆಯೆಂದು ನಾವು ನಿರೀಕ್ಷಿಸಿದೆವು. ನಾವು ಯುವಕ ಜೋಷಿಯನ್ನು ರಕ್ಷಿಸಬೇಕೆಂದಿದ್ದೆವು. ಆದರೆ ಅದು ಸಾಧ್ಯವಾಗಲಿಲ್ಲ.

ಕಲ್ಕತ್ತಾದಲ್ಲಿ ಕಾರ್ಮಿಕ ಮತ್ತು ರೈತ ಪಕ್ಷಗಳ ಸಮ್ಮೇಳನವು ನಡೆಯುತ್ತಿದ್ದಾಗ, ಡಾಕ್ಟರ್ ಗಂಗಾಧರ್ ಅಧಿಕಾರಿಯವರು ಜರ್ಮನಿಯಲ್ಲಿ ಆರು ವರ್ಷಗಳು ಇದ್ದನಂತರ ಭಾರತಕ್ಕೆ ಹಿಂದಿರುಗಿದರು. ಬರ್ಲಿನ್ ವಿಶ್ವ ವಿದ್ಯಾನಿಲಯದಲ್ಲಿ ಭೌತಿಕ ರಸಾಯನಿಕ ಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದ ನಂತರ ಅವರು ಅಲ್ಲಿಯೇ ಸ್ವಲ್ಪಕಾಲ ಕೆಲಸ ಮಾಡುತ್ತಿದ್ದರು. ಅವರು ಜರ್ಮನಿಯ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು. ಅವರು ಮುಂಬಯಿಂದ ಕಲ್ಕತ್ತೆಗೆ ನೇರವಾಗಿ ಬಂದರು. ಅವರು ಜರ್ಮನಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದುದರಿಂದ ಅವರನ್ನು ನಾವು ಕೇಂದ್ರ ಸಮಿತಿಯ ಸಭೆಯಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿಗೆ ತೆಗೆದುಕೊಂಡೆವು.

ಕೋಮಿನ್‌ಟರ್ನ್‌ಗೆ ಸೇರ್ಪಡೆ

ಅಧಿಕೃತವಾಗಿ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಅಂದಿನವರೆಗೆ ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯಕ್ಕೆ ಸೇರಿಕೊಂಡಿರಲಿಲ್ಲ. ಆದರೆ, ನಾವು ಸೇರಬೇಕೆಂದಿದ್ದರೆ ಸಾಧ್ಯವಿತ್ತು. ನಮ್ಮ ಪಾರ್ಟಿ ಸದಸ್ಯರು ಬಹಳ ಕಮ್ಮಿ ಇದ್ದುದರಿಂದ ನಾವು ಸೇರಲು ಇಚ್ಛಿಸಲಿಲ್ಲ. ಹಾಗಿದ್ದರೂ ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯವು ಅದರ ಅಂಗವಾಗಿ ನಮ್ಮ ಪಾರ್ಟಿಯನ್ನು ಮಾನ್ಯಮಾಡಿತ್ತು. ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯರು ಆರನೆಯ ವಿಶ್ವ ಅಧಿವೇಶನದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಮ್ಮ ಇಬ್ಬರು ಪಾರ್ಟಿ ಸದಸ್ಯರನ್ನು ಪ್ರತಿನಿಧಿಗಳಾಗಿ ತೆಗೆದುಕೊಳ್ಳಲಾಗಿತ್ತೆಂದು ನಮಗೆ ತಿಳಿದುಬಂದಿತು. ಈ ವಿಷಯವನ್ನು ನಮ್ಮ ಕೇಂದ್ರ ಸಮಿತಿ ಸಭೆಯಲ್ಲಿ ಚರ್ಚಿಸಿದೆವು. ಈ ಇಬ್ಬರು ಪ್ರತಿನಿಧಿಗಳಲ್ಲಿ ಒಬ್ಬರನ್ನು ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯದ ಕೇಂದ್ರಕ್ಕೆ ಕಳಿಸಲು ತೀರ್ಮಾನಿಸಲಾಯಿತು. ಆದರೆ ವ್ಯವಸ್ಥೆಯನ್ನು ಮಾಡುವುದಕ್ಕೆ ಮುಂಚೆಯೇ ಮೀರತ್ ಘಟನೆಗಳು ಬಂದುವು.

ಕಾರ್ಮಿಕ ಮತ್ತು ರೈತ ಪಕ್ಷದ ಸಮ್ಮೇಳನಕ್ಕೆ ಕಮ್ಯೂನಿಸ್ಟ್ ಅಂತರರಾಷ್ಟ್ರೀಯವು ಒಂದು ಸಂದೇಶವನ್ನು ಕಳಿಸಿತ್ತು. ಸಮ್ಮೇಳನದ ಕೊನೆಯಲ್ಲಿ ಅದು ನಮಗೆ ತಲುಪಿತು. ಆ ಸಂದೇಶದಲ್ಲಿ ಆರಂಭದಲ್ಲಿಯೇ ಕಾರ್ಮಿಕ ಮತ್ತು ರೈತ ಪಕ್ಷವು ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಅಂಗವಾಗಿಲ್ಲ ಎಂದು ವಿವರಿಸಲಾಗಿತ್ತು. ನಂತರ ಎರಡು ವರ್ಗಗಳ ಆಧಾರದ ಮೇಲೆ ಪಕ್ಷವನ್ನು ಸ್ಥಾಪಿಸುವುದನ್ನು ಟೀಕಿಸಲಾಗಿತ್ತು. ರಾಜಕೀಯ ಪಕ್ಷವು ಒಂದು ವರ್ಗದ ಆಧಾರದ ಮೇಲೆ ರೂಪುಗೊಳ್ಳಬೇಕಾಗಿತ್ತು. ಭಾರತ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸಭೆಯು ಮುಕ್ತಾಯಗೊಂಡಿದ್ದುದರಿಂದ ಈ ವಿಷಯದ ಬಗ್ಗೆ ಚರ್ಚಿಸಲಾಗಲಿಲ್ಲ. ಆದರೆ ವೈಯಕ್ತಿಕವಾಗಿ ನಾವು ಈ ಟೀಕೆಯ ಮುಖ್ಯ ಉದ್ದೇಶವನ್ನು ಅರಿತುಕೊಂಡಿದ್ದೆವು.

೧೯೨೮ರ ಹೋರಾಟಗಳು

1928ರ ಅಂತ್ಯದಲ್ಲಿ ದೇಶಾದ್ಯಂತ ಕಾರ್ಮಿಕರ ಹೋರಾಟಗಳು ಆರಂಭವಾದುವು. 1928ರಲ್ಲಿ ಈ ಹೋರಾಟವು ಹೆಚ್ಚು ಬಲಗೊಂಡಿತು ಮತ್ತು ಹರಡಿಕೊಂಡಿತು. ಈ ಹೋರಾಟದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಸದಸ್ಯರು ಮಾತ್ರವೇ ಅಲ್ಲದೆ ಕಾರ್ಮಿಕ ಮತ್ತು ರೈತ ಪಕ್ಷದ ಸದಸ್ಯರುಗಳೂ ಸಹ ಐಕ್ಯತೆಯಿಂದ ಪ್ರಾಮಾಣಿಕವಾಗಿ ಭಾಗವಹಿಸಿದರು. ಮುಷ್ಕರದ ಸಭೆಗಳಲ್ಲಿ ಅಧಿಕ ಬೇಡಿಕೆಗಳ ವಿಷಯ ಮಾತ್ರವೇ ಅಲ್ಲದೆ ರಾಜಕೀಯ ವಿಷಯಗಳನ್ನು ಕುರಿತು ಮಾತನಾಡಲಾಗುತ್ತಿತ್ತು. ಮುಂಬಯಿ ಕೆಲಸಗಾರರ ನಡುವೆ ಹಾಗೂ ಬಂಗಾಳದಲ್ಲಿ ಕೆಲವೆಡೆ ನಮ್ಮ ನಾಯಕತ್ವವು ಸ್ಥಾಪನೆಯಾಯಿತು. 1928ರ ಕಾರ್ಮಿಕರ ಹೋರಾಟದ ಪರಿಣಾಮವಾಗಿ ಟ್ರೇಡ್ ಯೂನಿಯನ್ ಚಳವಳಿಯು ತೀವ್ರಗೊಂಡಿತು. ಈ ಚಳವಳಿಯ ಸ್ವಭಾವವು ಸಂಪೂರ್ಣವಾಗಿ ಹೊಸದಾಗಿತ್ತು.

1928ರ ಕಾರ್ಮಿಕ ಹೋರಾಟಗಳು ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಬಲವಾಗಿ ಕಟ್ಟಲು ಅವಕಾಶ ಒದಗಿದರೂ ಸಾಧ್ಯವಾಗಲಿಲ್ಲ. ಕಾರ್ಮಿಕ ವಿಶಾಲ ಸಮೂಹಕ್ಕೆ ಪಾರ್ಟಿ ಸೇರಲು ಅವಕಾಶವಾಯಿತು, 1928ರ ಹೋರಾಟವು ದುಡಿಯುವ ಜನತೆಯ ಮೇಲೆ ಸಾಮಾನ್ಯ ಪ್ರಭಾವವನ್ನು ಬೀರಿತ್ತು. ಅವರಲ್ಲಿ ಅನೇಕರು ಕಮ್ಯೂನಿಸ್ಟ್ ಪಾರ್ಟಿ ಸೇರಲು ತಯಾರಾಗಿದ್ದರು. ಭಾತರ ಸರಕಾರವು ನಮ್ಮನ್ನು ಮುರಿಯಲು ತನ್ನ ಅಸ್ತ್ರಗಳನ್ನು ತೀವ್ರಗೊಳಿಸುತ್ತಿತ್ತು. ಸಾರ್ವಜನಿಕ ರಕ್ಷಣಾ ಮಸೂದೆ ಶಾಸನ ಸಭೆಯ ಮುಂದೆ ಬಂದಾಗ ನಮಗೆ ಅದರ ಗೂಢಾರ್ಥ ತಿಳಿಯಿತು. ಆದರೆ ಆ ಸಮಯದಲ್ಲಿ ನಮಗೆ ಭೂಗತವಾಗಿ ಕೆಲಸ ಮಾಡಲು ವ್ಯವಸ್ಥೆಯಿರಲಿಲ್ಲ. ಈ ಸಮಯದಲ್ಲಿ ಮುಂಬಯಿಯ ಕಾಮ್ರೇಡ್ ಎಸ್. ವಿ. ದೇಶಪಾಂಡೆ ಮತ್ತು ಬಿ. ಟಿ. ರಣದಿವೆಯವರನ್ನು ಪಾರ್ಟಿಗೆ ತೆಗೆದುಕೊಳ್ಳಲಾಯಿತು. ಅಸಹಕಾರ ದಿನಗಳಲ್ಲಿ ದೇಶಪಾಂಡೆಯವರು ಕಾಲೇಜನ್ನು ತ್ಯಜಿಸಿದ್ದರು. ಕಾಮ್ರೇಡ್ ಬಿ. ಟಿ. ರಣದಿವೆ ವಿಶ್ವವಿದ್ಯಾನಿಲಯದಲ್ಲಿ ಬುದ್ಧಿವಂತರಾದ ವಿದ್ಯಾರ್ಥಿಯಾಗಿದ್ದರು. ಅವರು ಅರ್ಥಶಾಸ್ತ್ರದಲ್ಲಿ ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರು. ಡಾ॥ ಗಂಗಾಧರ ಅಧಿಕಾರಿ ಅವರ ಬಂಧುವಾಗಿದ್ದರು. ಅಧಿಕಾರಿಯವರ ಪ್ರಭಾವದಿಂದ ಕಾಮ್ರೇಡ್ ರಣದಿವೆ ಪಾರ್ಟಿ ಕಡೆಗೆ ಆಕರ್ಷಿತರಾಗಿದ್ದರು.

1929ರ ಫೆಬ್ರುವರಿ ತಿಂಗಳಲ್ಲಿ ನಾವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡು ಸೈಮನ್ ಆಯೋಗದ ವಿರುದ್ಧ ಕಲ್ಕತ್ತದಲ್ಲಿ ದೊಡ್ಡ ಪ್ರದರ್ಶನ ನಡೆಸಲು ತೊಡಗಿದೆವು. ಈ ಪ್ರದರ್ಶನದ ವಿಶೇಷತೆ ಎಂದರೆ ನಮ್ಮ ಭಾಗದಿಂದ ವಿವಿಧ ಪೋಸ್ಟರುಗಳನ್ನು ಘೋಷಣೆಗಳೊಡನೆ ಪ್ರದರ್ಶಿಸಿದ್ದಾಗಿತ್ತು. ಮೆರವಣಿಗೆಯಲ್ಲಿ "ಕ್ರಾಂತಿ ಚಿರಾಯುವಾಗಲಿ" ಎನ್ನುವ ಘೋಷಣೆಯನ್ನು ಪ್ರಥಮ ಬಾರಿಗೆ ಪ್ರದರ್ಶಿಸಲಾಯಿತು. ಈ ಘೋಷಣೆಯನ್ನು ಮೊದಲ ಬಾರಿಗೆ ಭಾರತದಲ್ಲಿ ಮೌಲಾನ ಹಜ್ರತ್ ಮೊಹಾನಿಯವರು ಪೂರ್ಣ ಸ್ವಾತಂತ್ರ್ಯಕ್ಕಾಗಿ ಇತ್ತ ಕರೆಯ ಮೇಲೆ ಹಾಕಲಾಗಿದ್ದ ಮೊಕದ್ದಮೆಯ ಸಂದರ್ಭದಲ್ಲಿ ಇತ್ತಿದ್ದರೆಂದು ಯಾರೋ ತಿಳಿಸಿದರು. ಒಂದು ದಿನ ಅವರು ನನಗೆ ತಮ್ಮ ಹೇಳಿಕೆಗಳನ್ನು ಓದಿದರು. ಆದರೆ ಇಂದು ಆ ಘೋಷಣೆ ಅದರಲ್ಲಿತ್ತೆಂದು ನನಗೆ ನೆನಪಿಲ್ಲ. ಅದು ಇದ್ದಿದ್ದೇ ಆದರೆ ಈ ಘೋಷಣೆಯನ್ನು ಮೊದಲ ಬಾರಿಗೆ ಕೊಟ್ಟ ಅಭಿನಂದನೆ ಅವರಿಗೆ ಸಲ್ಲುತ್ತದೆ. ಇಲ್ಲದಿದ್ದರೆ, ಭಾರತದಲ್ಲಿ ಈ ಘೋಷಣೆಯನ್ನಿತ್ತವರು ಮೊದಲು ನಾವೇ. ಇದಾದ ನಂತರ, ಕಲ್ಕತ್ತದಲ್ಲಿ ನಾವು ಮಾಡಿದ ಕೊನೆಯ ಕೆಲಸವೆಂದರೆ, ಕ್ಲೈವ್ ಸೆಣಬು ಕಾರ್ಖಾನೆಯಲ್ಲಿ ಮುಷ್ಕರಕ್ಕೆ ನಾಯಕತ್ವ ಕೊಟ್ಟದ್ದು. ಇದಾದ ಕೂಡಲೇ ಚರಿತ್ರಾರ್ಹವಾದ ಮಾರ್ಚಿ 20, 1929 ಬಂದಿತು.

ಮೀರತ್ ಒಳಸಂಚು ಮೊಕದ್ದಮೆ

ಭಾರತ ಕಮ್ಯೂನಿಸ್ಟ್ ಪಕ್ಷದ ಇತಿಹಾಸದಲ್ಲಿ 1929ರ ಮಾರ್ಚ್ 20, ಮರೆಯಲಾಗದ ದಿನವಾಗಿದೆ. ಬ್ರಿಟಿಷ್ ಸರಕಾರದಿಂದ ಬರಬ

ಗೆ ಅಥವಾ 12,10,7,5 ಮತ್ತು 3 ವರ್ಷದ ಶಿಕ್ಷೆಗಳಿಗೆ ಒಳಗಾದರು.

ಸೆಷನ್ಸ್ ಕೋರ್ಟಿನಲ್ಲಿ ತೀರ್ಪು ಹೊರಬೀಳುವುದರೊಳಗೇ ಅರವತ್ತೆಂಟು ವಯಸ್ಸಿನ ಎಂಜಿನಿಯರ್ ಆದ ಧುಂಡಿರಾಜ್ ತೇಂಗಡಿ ತೀರಿಕೊಂಡರು. ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಅವರು ಪೂನಾಕ್ಕೆ ಹೋಗಿದ್ದರು. ಅವರು ಮುಂಬಯಿ ಕಾರ್ಮಿಕ ಮತ್ತು ರೈತ ಪಕ್ಷದ ಅಧ್ಯಕ್ಷರಾಗಿದ್ದರು. ಮೊಕದ್ದಮೆಯು ಸೆಷನ್ಸ್ ಕೋರ್ಟಿಗೆ ಹಾಕಲ್ಪಟ್ಟ ನಂತರ ಸರಕಾರದ ವಕೀಲರಾದ ಲಾಂಗ್‌ಫೊರ್ಡ್ ಜೇಮ್ಸ್ ಮಡಿದರು. ನಮ್ಮನ್ನು ಮಾರ್ಚ್ 20, 1929ರಲ್ಲಿ ಬಂಧಿಸಲಾಯಿತು, ಆದರೆ ಸೆಷನ್ಸ್ ನ್ಯಾಯಾಧೀಶರು ತೀರ್ಪನ್ನು ಜನವರಿ 16,1933ರಲ್ಲಿ ಇತ್ತರು. ಈ ಮೊಕದ್ದಮೆಗಾಗಿ ಅಚ್ಚಾಗಿದ್ದ ಕಾಗದವು ಹತ್ತು ಸಾವಿರ ಫುಲ್‌ಸ್ಕ್ಯಾಪ್ ಹಾಳೆಗಳಾಗಿದ್ದುವು. ಮೀರತ್ ಒಳಸಂಚಿನ ವಿಚಾರಣೆಯು ವಿಶ್ವದಲ್ಲೇ ಪ್ರಭುತ್ವದ ವಿಚಾರಣೆಗಳಲ್ಲಿ ಅತ್ಯಂತ ದೊಡ್ಡದಾಗಿತ್ತು.

ಸೆಷನ್ಸ್ ಕೋರ್ಟಿನಲ್ಲಿ ತೀರ್ಪು ಹೊರಬೀಳುವುದಕ್ಕೆ ಮುಂಚೆ ಶೌಕತ್ ಉಸ್ಮಾನಿ ವರ್ತಿಸುತ್ತಿದ್ದ ರೀತಿಯಿಂದಾಗಿ ಅವರನ್ನು ಪಾರ್ಟಿಯಿಂದ ಹೊರಹಾಕದೆ ವಿಧಿಯಿರಲಿಲ್ಲ. 12 ವರ್ಷ ಕಠಿಣ ಶಿಕ್ಷೆ ವಿಧಿಸಲಾದ ನಂತರ ನಿಂಬ್ಕರ್‌ರವರು ಶಿಥಿಲಗೊಂಡರು. ಅವರನ್ನೂ ಪಾರ್ಟಿಯಿಂದ ಹೊರಹಾಕಲಾಯಿತು. ಮೀರತ್ ಒಳಸಂಚು ಮೊಕದ್ದಮೆಯ ಕಾಲದಿಂದ ಭಾರತದಲ್ಲಿ ಕಮ್ಯೂನಿಸ್ಟ್ ಸಿದ್ಧಾಂತವು ನೆಲೆಗೊಳ್ಳಲಾರಂಭವಾಯಿತು. ಬಂಗಾಳದ ಜೈಲುಗಳಲ್ಲಿ ಮತ್ತು ಶಿಬಿರಗಳಲ್ಲಿ ನೂರಾರು ಭಯೋತ್ಪಾದಕ ರಾಜಕೀಯ ಕೈದಿಗಳು ಮಾರ್ಕ್ಸ್‌ವಾದೀ ಸಾಹಿತ್ಯವನ್ನು ಓದಲಾರಂಭಿಸಿದರು. ಬಿಡುಗಡೆಯ ನಂತರ ಅವರಲ್ಲಿ ಬಹುಮಂದಿ ಕಮ್ಯೂನಿಸ್ಟ್ ಪಾರ್ಟಿಗೆ ಸೇರಿಕೊಂಡರು.

1929ರಲ್ಲಿ ನಮ್ಮ ಮೊಕದ್ದಮೆ ಆರಂಭವಾದ ನಂತರ, ಎಂ. ಎನ್. ರಾಯ್ ಯುರೋಪಿನ ಕಮ್ಯೂನಿಸ್ಟ್ ಪಾರ್ಟಿಯಿಂದ ಹೊರಹಾಕಲ್ಪಟ್ಟರು. ಒಂದಾನೊಂದು ಕಾಲದಲ್ಲಿ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಪೌರ್ವಾತ್ಯ ವಿಭಾಗಕ್ಕೆ ಅವರು ನಾಯಕರಾಗಿದ್ದರು. ಅವರನ್ನು ಹೊರಹಾಕಿದ್ದಕ್ಕೆ ನನಗೆ ಕಾರಣ ತಿಳಿಯದು. ನನಗೂ ಅವರ ಕೆಲಸದ ಬಗ್ಗೆ ದೂರುಗಳಿತ್ತು. ನನ್ನ ದೂರೂ ಸಹ ಅವರ ಉಚ್ಚಾಟನೆಗೆ ಒಂದು ಕಾರಣವಾಗಿತ್ತೇ ಎಂಬುದರ ಬಗ್ಗೆ ನನಗೆ ಸುದ್ದಿ ಬರಲಿಲ್ಲ. ಅಲ್ಲಿಂದ ಉಚ್ಚಾಟನೆಯಾದ ಮೇಲೆ ಭಾರತಕ್ಕೆ ಬಂದು ಇಲ್ಲಿ ಏನಾದರೂ ಕೆಲಸ ಮಾಡಲು ಯತ್ನಿಸಬಹುದೆಂದು ನಾವು ತಿಳಿದಿದ್ದೆವು. ಅವರು ಹಾಗೆಯೇ ಮಾಡಿದರು. ಭಾರತ ಕಮ್ಯೂನಿಸ್ಟ್ ಪಕ್ಷ ಸಂಘಟಿಸಲು "ಕ್ರಾಂತಿಕಾರಿ" ಎನ್ನುವ ಹೆಸರಿನಲ್ಲಿ ಗುಪ್ತ ಪತ್ರಗಳನ್ನು ಅವರು ಹಂಚಲು ಆರಂಭಿಸಿದರು.

ಮೀರತ್ ನಂತರ

1930ರಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಕಮ್ಯೂನಿಸ್ಟ್ ಅಂತರರಾಷ್ಟ್ರೀಯವನ್ನು ಸೇರಿಕೊಂಡಿತು. ಇದಾದ ನಂತರ ಎಂ ಎನ್. ರಾಯ್ "ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸಲು ಕ್ರಾಂತಿಕಾರಿ ಸಮಿತಿ"ಯ ಹೆಸರಿನಲ್ಲಿ ಪತ್ರಗಳು ಹಂಚುವುದು ನಿಂತುದು ಕಂಡುಬಂದಿತು. ಭಾರತ ಕಮ್ಯೂನಿಸ್ಟ್ ಪಕ್ಷವು ಸೇರಿದಾಗಲೇ ಇಂಡೋಚೀಣ ಕಮ್ಯೂನಿಸ್ಟ್ ಪಕ್ಷವೂ ಕಮ್ಯೂನಿಸ್ಟ್ ಅಂತರರಾಷ್ಟ್ರೀಯಕ್ಕೆ ಸೇರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕ್ರಮದ ಕರಡನ್ನು ಪ್ರಕಟಿಸಲಾಯಿತು. ಡಿಸೆಂಬರ್ 19, 1930ರಲ್ಲಿ ಇದು ಇಂಟರ್‌ನ್ಯಾಷನಲ್ ಪ್ರೆಸ್ ಕರೆಸ್ಪಾಂಡೆನ್ಸ್‌ನಲ್ಲಿ ಪ್ರಕಟವಾಯಿತು. ಮುಂಬಯಿಯಲ್ಲಿದ್ದ ಪಾರ್ಟಿ ನಾಯಕರುಗಳು ತಮ್ಮಲ್ಲಿ ಭಿನ್ನಾಭಿಪ್ರಾಯಗಳು ಒಡಕು ಇದ್ದುದರಿಂದ ಅಖಿಲ ಭಾರತ ಪಾರ್ಟಿಯಲ್ಲಿ ಒಂದುಗೂಡಲಾಗಲಿಲ್ಲ. ಈ ಸಮಯದಲ್ಲಿ ಕಮ್ಯೂನಿಸ್ಟ್ ಅಂತರರಾಷ್ಟ್ರೀಯವೂ ಸಹ ಭಾರತ ಕಮ್ಯೂನಿಸ್ಟ್ ಪಕ್ಷಕ್ಕೆ ಮಾನ್ಯತೆ ಕೊಡುವುದಕ್ಕೆ ತಡೆಹಿಡಿಯಿತು.

ಕಲ್ಕತ್ತಾ ಕಾಮ್ರೇಡುಗಳು (ಕಾಮ್ರೇಡ್ ಹಲೀಮ್‌ರವರೂ ಇದ್ದರು) "ಭಾರತ ಕಮ್ಯೂನಿಸ್ಟ್ ಪಾರ್ಟಿ ಕಲ್ಕತ್ತಾ ಸಮಿತಿ" ಹೆಸರಿನಲ್ಲಿ ಕೆಲಸವನ್ನಾರಂಭಿಸಿದರು. ಕಲ್ಕತ್ತಾ ಸಮಿತಿಯ ಕಾರ್ಯವನ್ನು ಒಮ್ಮೆ ಸ್ಟಾಲಿನ್ನರು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ವಿಸ್ತೃತ ಸಭೆಯಲ್ಲೋ ಅಥವಾ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಕೇಂದ್ರ ಸಮಿತಿಯ ವಿಸ್ತೃತ ಸಭೆಯಲ್ಲೋ ಪ್ರಸ್ತಾಪಿಸಿದ್ದರು. ಯಾವುದೆಂದು ನನಗೆ ಸರಿಯಾಗಿ ನೆನಪಿಲ್ಲ. ಕಲ್ಕತ್ತಾ ಸಮಿತಿಯವರು ಕಮ್ಯೂನಿಸ್ಟ್ ಪಾರ್ಟಿಗೆ ಅಖಿಲ ಭಾರತ ರೂಪು ಕೊಡಬೇಕೆಂದು ಹಲವು ಬಾರಿ ಕೇಳಿಕೊಂಡರೂ ಮುಂಬಯಿಯವರು ಜವಾಬಿಯಲಿಲ್ಲ. ನಂತರ ಅವರು ಬೇರೆ ಬೇರೆ ಮಾರ್ಗದಿಂದ ಕಮ್ಯೂನಿಸ್ಟ್ ಅಂತರರಾಷ್ಟ್ರೀಯಕ್ಕೆ ವರದಿ ಕಳಿಸಲಾರಂಭಿಸಿದರು.

1932ರ ಅಂತ್ಯದಲ್ಲಿ, ಫಿಲಿಪ್ ಸ್ಪ್ರಾಟ್, ಬೆನ್‌ಬ್ರಾಡ್ಲೆ ಮತ್ತು ನಾನು ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯಕ್ಕೆ ವರದಿ ಕಳಿಸಲು ಅವಕಾಶವಾಯಿತು. ಈ ವರದಿಗಳು ಪರಿಣಾಮಕಾರಿಯಾಗಿದ್ದುವು. 1932 ರ ಮೇಲೆ ತಿಂಗಳಲ್ಲಿ ಚೀಣ, ಜರ್ಮನಿ ಮತ್ತು ಗ್ರೇಟ್ ಬ್ರಿಟನ್ ಕಮ್ಯೂನಿಸ್ಟ್ ಪಕ್ಷಗಳ ಕೇಂದ್ರ ಸಮಿತಿಗಳು ಭಾರತ ಕಮ್ಯೂನಿಸ್ಟ್ ಪಕ್ಷಕ್ಕೆ ಬಹಿರಂಗ ಪತ್ರಗಳನ್ನು ಕಳಿಸಿದುವು. ಆ ಪತ್ರದಲ್ಲಿ ಅವರು ಭಾರತ ಕಮ್ಯೂನಿಸ್ಟ್ ಪಕ್ಷವು ಕೆಲಸ ಮಾಡುತ್ತಿದ್ದ ಕ್ರಮವನ್ನು ತೀವ್ರವಾಗಿ ಟೀಕಿಸಿದ್ದರು. ಕಾರ್ಯಕ್ರಮದ ಕರಡಿನ ಆಧಾರದ ಮೇಲೆ ಅಖಿಲ ಭಾರತ ಪಕ್ಷವನ್ನು ರಚಿಸುವ ಅಗತ್ಯತೆಯನ್ನು ಒತ್ತಿ ಹೇಳಿದ್ದರು. ಒಂದು ವರ್ಷದ ಮೇಲೆ ಜುಲೈ 16, 1933 ರಲ್ಲಿ ಚೀಣೀ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಭಾರತ ಕಮ್ಯೂನಿಸ್ಟ್ ಪಕ್ಷಕ್ಕೆ ಮತ್ತೊಂದು ಬಹಿರಂಗ ಪತ್ರವನ್ನು ಕಳಿಸಿತು. ಈ ಪತ್ರದಲ್ಲಿ ಅವರ ಟೀಕೆಯು ಇನ್ನೂ ಹೆಚ್ಚು ತೀವ್ರವಾಗಿಯೂ ಕಠಿಣವಾಗಿಯೂ ಇತ್ತು. ಸೋವಿಯತ್ ಯೂನಿಯನ್ ಮತ್ತು ಚೀಣ ಕಮ್ಯೂನಿಸ್ಟ್ ಪಾರ್ಟಿಗಳ ಅನುಭವದ ನಿದರ್ಶನಗಳನ್ನಿತ್ತು ವಿವಿಧ ರೀತಿಯಲ್ಲಿ ಭಾರತ ಕಮ್ಯೂನಿಸ್ಟರಿಗೆ ಅಖಿಲ ಭಾರತ ಪಕ್ಷದ ರಚನೆಯ ಅಗತ್ಯತೆಯನ್ನು ಒತ್ತಿ ಹೇಳಿದ್ದರು. ಭಾರತ ಕಮ್ಯೂನಿಸ್ಟ್ ಪಕ್ಷದ ಕಲ್ಕತ್ತಾ ಸಮಿತಿಯ ಕಾರ್ಯವನ್ನು ಹೊಗಳಿ ಈ ರೀತಿ ಹೇಳಿದ್ದರು: ಆದ್ದರಿಂದಾಗಿಯೆ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕಲ್ಕತ್ತಾ ಸಮಿತಿಯ ಕಾರ್ಯವನ್ನು ನಾವು ಸ್ವಾಗತಿಸುತ್ತೇವೆ. ಅವರು ಅಖಿಲ ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಲು ಕರೆಯನ್ನು ದೃಢವಾಗಿ ತೆಗೆದುಕೊಂಡಿದ್ದಾರೆ. ಪಾರ್ಟಿ ಚಟುವಟಿಕೆಯನ್ನು ಅಖಿಲ ಭಾರತ ರೀತ್ಯ ನಡೆಸುವುದರ ಅಗತ್ಯತೆಯನ್ನು ಅವರು ಅರಿತಿದ್ದಾರೆ, ಭಾರತ ಕಮ್ಯೂನಿಸ್ಟ್ ಪಾರ್ಟಿಯ ಇತಿಹಾಸದಲ್ಲಿ ಅಡ್ಡಿ ಆತಂಕಗಳು ಮತ್ತು ಒಳಜಗಳ ಮತ್ತು ಒಡಕಿನ ಪ್ರಕರಣಗಳನ್ನು ಅಂತ್ಯಗೊಳಿಸಲು ಸೂಚಿಸಿದ್ದಾರೆ ಮತ್ತು ಪ್ರಬಲವಾದ ಐಕ್ಯತೆಯಿಂದ ಕೂಡಿದ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಹೊಸ ಸಂಪುಟವನ್ನು ತಯಾರಿಸಲು ಅವರು ಸೂಚಿಸಿದ್ದಾರೆ.

ಮೀರತ್ ಒಳಸಂಚು ಮೊಕದ್ದಮೆಯಲ್ಲಿ ತೀವ್ರವಾದ ಶಿಕ್ಷೆ ವಿಧಿಸಲಾಗಿದ್ದುದರಿಂದ ಅದರ ವಿರೋಧವಾಗಿ ಅಲಹಾಬಾದ್ ಹೈಕೋರ್ಟಿನಲ್ಲಿ ಅಪೀಲು ಹಾಕಲಾಯಿತು. ಆಗಸ್ಟ್ 3, 1933ರಲ್ಲಿ ಈ ಅಪೀಲಿನ ಮೇಲೆ ತೀರ್ಪು ಹೊರಬಿದ್ದಿತು. ನಮ್ಮ ಮೇಲಿನ ಶಿಕ್ಷೆಯನ್ನು ಕಡಿಮೆ ಮಾಡಲಾಯಿತು. ಡಾಂಗೆ, ಉಸ್ಮಾನಿ ಮತ್ತು ನನ್ನ ಮೇಲೆ ಶಿಕ್ಷೆಯನ್ನು ಮೂರು ವರ್ಷಗಳಿಗೆ ಇಳಿಸಲಾಯಿತು, ಫಿಲಿಪ್ ಸ್ಪ್ರಾಟರ ಶಿಕ್ಷೆಯನ್ನು ಎರಡು ವರ್ಷಗಳಿಗೆ ಮತ್ತು ಘಾಟೆ, ಬೆನ್‌ಬ್ರಾಡ್ಲೆ, ಮಿರಜ್‌ಕರ್, ಜೋಗ್ಲೇಕರ್, ನಿಂಬ್ಕರ್, ಸೋಹನ್ ಸಿಂಗ್ ಜೋಷ್, ಅಬ್ದುಲ್ ಮಜೀದ್ ಮತ್ತು ಧರಣಿ ಗೋಸ್ವಾಮಿಯವರ ಶಿಕ್ಷೆಯನ್ನು ಒಂದು ವರ್ಷಕ್ಕೆ ಇಳಿಸಲಾಯಿತು. ಗೋಪೆನ್ ಚಕ್ರವರ್ತಿಯ ಶಿಕ್ಷೆಯನ್ನು ಏಳು ತಿಂಗಳಿಗೆ ಇಳಿಸಲಾಯಿತು. ದೇಸಾಯ್, ಹಚಿನ್‌ಸನ್, ರಾಧಾರಮಣ ಮಿತ್ರ ಮತ್ತಿತರ ಒಂಭತ್ತು ಮಂದಿಯನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಲಾಯಿತು. ಆಗಸ್ಟ್ 3, 1933ರ ಹೊತ್ತಿಗೆ ಡಾ॥ ಅಧಿಕಾರಿ, ಪಿ. ಸಿ. ಜೋಷಿ, ಅಯೋಧ್ಯ ಪ್ರಸಾದ್, ಷಮ್ಸುಲ್ ಹುದ ಮತ್ತು ಗೋಪಾಲ್ ಬಸಾಕ್‌ರವರ ಶಿಕ್ಷೆ ಅವಧಿಯು ಮುಗಿದಿದ್ದುದರಿಂದ ಅಂದೇ ಬಿಡುಗಡೆ ಹೊಂದಿದರು.

ಒಂದು ವರ್ಷ ಶಿಕ್ಷೆಗೆ ಗುರಿಯಾಗಿದ್ದವರನ್ನು ಆ ವರ್ಷದ ನವೆಂಬರ್ ತಿಂಗಳಲ್ಲಿ ಬಿಡುಗಡೆಯಾದರು.

ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರು ಬಿಡುಗಡೆಯ ನಂತರ ಕಲ್ಕತ್ತಾ ಸಮಿತಿಯ ಸಹಾಯದಿಂದ ಪುನ್ಹ ಪಾರ್ಟಿ...
...ನ್ನು ರಚಿಸಲು ಯತ್ನಿಸಿದರು. ಮುಂ...
...ಯಿಯಿಂದ ಕೆಲವು ಕಾಮ್ರೇಡುಗಳು ...
...ರಿಕೊಳ್ಳಲು ಬಂದರು, ಪುನಃ ಕೆಲವ...
...ಬರಲಿಲ್ಲ. ಈ ಪ್ರಯತ್ನದ ಫಲವಾಗಿ, ...
...ಸೆಂಬರ್ 1933 ರಲ್ಲಿ ಕಲ್ಕತ್ತಾದಲ್ಲಿ ...
...ರ್ಟಿಯ ಗುಪ್ತ ಸಮ್ಮೇಳನವೊಂದು ಜ...
...ಗಿತು. ಆ ಸಮ್ಮೇಳನದಲ್ಲಿ, ಪಾರ್ಟಿ...
...ಹೊಸ ರಾಜಕೀಯ ಕಾರ್ಯಕ್ರಮವನ್ನು...
...ಮತ್ತು ಹೊಸ ಘಟನೆಯನ್ನು ಅಂಗೀಕ...
...ಸಲಾಯಿತು ಮತ್ತು ಕೇಂದ್ರ ಸಮಿತಿ...
...ನ್ನು ಪುನಃ ಆರಿಸಲಾಯಿತು. ಡಾ॥ ಅ...
...ಕಾರಿ ಪ್ರಧಾನ ಕಾರ್ಯದರ್ಶಿಯಾದರು...
...ಕಾಮ್ರೇಡ್ ಬೆನ್‌ಬ್ರಾಡ್ಲೆ ತನ್ನ ವರ...
...ಯೊಂದಿಗೆ ಯೂರೋಪಿಗೆ ಹೋದರು...
...ಭಾರತ ಕಮ್ಯೂನಿಸ್ಟ್ ಪಕ್ಷವು ಮು...
...ಮೂರನೆ ಕಮ್ಯೂನಿಸ್ಟ್ ಅಂತರ ರಾಷ್ಟ್ರೀ...
...ಯದ ಒಂದು ಭಾಗವಾಯಿತು.

ವಾಸ್ತವವಾಗಿ ಕಮ್ಯೂನಿಸ್ಟ್ ಪಾರ್ಟಿ...
...ಯು ನ್ಯಾಯಬಾಹಿರವಾಗಿದ್ದರೂ, ಭಾರ...
...ತ ಸರ್ಕಾರವು ಅಧಿಕೃತವಾಗಿ ಇನ್ನೂ ಹಾ...
...ಗೆ ಘೋಷಿಸಿರಲಿಲ್ಲ. ಮೀರತ್ ಒಳಸಂ...
...ಚು ಮೊಕದ್ದಮೆಯಲ್ಲಿ ಸರಕಾರವು ...
...ಕೋರ್ಟಿನಿಂದ ಕಮ್ಯೂನಿಸ್ಟ್ ಪಾರ್ಟಿಯ...
...ನ್ನು ನ್ಯಾಯಬಾಹಿರವೆಂದು ಘೋಷಿಸು...
...ತೀರ್ಮಾನವನ್ನು ಪಡೆಯಿತು. ಈ ರೀ...
...ಯಲ್ಲಿ 1934ರಲ್ಲಿ, ಅಧಿಕೃತವಾಗಿ ಭಾರ...
...ತ ಸರಕಾರವು ಕಮ್ಯೂನಿಸ್ಟ್ ಪಾರ್ಟಿಯ...
...ನ್ನು ನ್ಯಾಯ ಬಾಹಿರವೆಂದು ಘೋಷಿ...
...ಸಿತು.

ಇನ್ನು ಒಂದಂಶವನ್ನು ಹೇಳಿ ನನ್ನ ...
...ಲೇಖನವನ್ನು ಮುಗಿಸುತ್ತೇನೆ. "ಸಾ...
...ಮ್ರಾಜ್ಯಶಾಹಿ ವಿರೋಧಿ ಜನತಾ ರಂಗ"...
...ಡಾಕ್ಯುಮೆಂಟನ್ನು ಆರ್. ಪಾಮೆದತ್...
...ಮತ್ತು ಬೆನ್‌ಬ್ರಾಡ್ಲೆ ಬರೆಯುವುದಕ್ಕೆ...
...ಮುಂಚೆ, ಕಮ್ಯೂನಿಸ್ಟ್ ಪಾರ್ಟಿ ಸದಸ್ಯ...
...ರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸದ...
...ಸ್ಯರಾಗಿರಲಿಲ್ಲ ಎಂದು ನಮ್ಮ ಕೆಲವು ಕಾ...
...ಮ್ರೇಡುಗಳ ಅಭಿಪ್ರಾಯವಾಗಿದೆ. ಈ ಅ...
...ಭಿಪ್ರಾಯವು ತಪ್ಪಾದುದು. ಪಾರ್ಟಿಯ...
...ನ್ನು ನಿರ್ಮಿಸಲು ಮೊದಲು ಕೆಲಸ ಆರಂ...
...ಭಿಸಿದವರೂ ಸಹ ಕಾಂಗ್ರೆಸ್ಸಿನಲ್ಲಿದ್ದರು...
...1926ಕ್ಕೆ ಮುಂಚೆ ಕಾಂಗ್ರೆಸ್ಸಿನ ಸದಸ್ಯ...
...ನಾಗಿರದಿದ್ದವನೆಂದರೆ ನಾನೊಬ್ಬನೆ...
...1925 ರಲ್ಲಿ ರಚಿಸಲಾದ ಕಮ್ಯೂನಿಸ್ಟ್...
...ಪಾರ್ಟಿ ಕೇಂದ್ರ ಸಮಿತಿಯ ಸದಸ್ಯರಲ್ಲಿ...
...ಮೂವರು ಕಾಂಗ್ರೆಸ್ಸಿನಲ್ಲಿದ್ದರು. ಮೀರತ್...
...ಒಳಸಂಚಿನಲ್ಲಿ ಅಪಾದಿತರಾಗಿದ್ದವರಲ್ಲಿ ...
...ಳು ಮಂದಿ ಕಾಂಗ್ರೆಸ್ಸಿನಲ್ಲಿದ್ದವರಾಗಿದ್ದರು...
...ಈ ಏಳು ಮಂದಿಯಲ್ಲಿ ಐದು ಮಂದಿ ಭಾ...
...ರತ ಕಮ್ಯೂನಿಸ್ಟ್ ಪಾರ್ಟಿ ಸದಸ್ಯರಾಗಿ...
...ದ್ದರು.

ಭಾರತದ ಸಂಪೂರ್ಣ ಸ್ವಾತಂತ್ರ್ಯ...
...ಗಿ ನಿರ್ಣಯವನ್ನು ಭಾರತ ರಾಷ್ಟ್ರೀಯ...
...ಕಾಂಗ್ರೆಸ್ಸಿನಲ್ಲಿ ಮೇಲಿಂದ ಮೇಲೆ ತಂದು...
...ಹೋರಾಡುತ್ತಿದ್ದುದು ಕಮ್ಯೂನಿಸ್ಟರು...
...ಆದರೆ ನಿರ್ಣಯ ಯಾವಾಗಲೂ ಬಿದ್ದು...
...ಹೋಗುತ್ತಿತ್ತು. ಯಾವ ಬಗೆಯ ...
...ಹಾಸಿಕ ತಪ್ಪುಗಳೂ ಈ ತಪ್ಪು ಕಲ್ಪನೆ...
...ಯಿಂದ ಉಂಟಾಗದಿರಲಿ ಎಂದು ನಾನು...
...ಈ ಅಂಶವನ್ನು ಹೇಳುತ್ತಿದ್ದೇನೆ.

—:o:—

ರಾಷ್ಟ್ರೀಯ ಅಂತರರಾಷ್ಟ್ರೀಯ

(೨ನೇ ಪುಟದಿಂದ)

ಕೀಲರ ಬಿಲ್ಲು 25,000 ಡಾಲರುಗಳಿಗೆ ಬಂದಿತು. ಜೂನ್ 1953ರಲ್ಲಿ ಹಣವನ್ನು ಪಾವತಿ ಮಾಡಲಾಯಿತು. ನಂತರ ಮತ್ತೊಂದು ವಕೀಲ ಸಂಸ್ಥೆಯನ್ನು ಕೇಳಿದ ನಂತರ, ಡಿಸೆಂಬರ್ 28, 1953ರಲ್ಲಿ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲಾಯಿತು. ಸರಕಾರ ಎಷ್ಟು ಮಟ್ಟಿಗೆ ವ್ಯವಹಾರ ನಡೆಸುತ್ತಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಸಾರ್ವಜನಿಕ ಹಣವು ಈ ರೀತಿ ವ್ಯಯವಾಗುತ್ತಿರುವುದು ಚಿಂತಾಜನಕವಾಗಿದೆ.

ಕಾಂಗ್ರೆಸ್ ಆಡಳಿತೆಯ ಹನ್ನೊಂದು ವರ್ಷಗಳಲ್ಲಿ ಇಂಥ ಪ್ರಕರಣಗಳು ಅನೇಕವಿವೆ. ಆಡಿಟ್ ವರದಿಗಳಲ್ಲಿ ಕೆಲವು ಅಂಶಗಳು ಮಾತ್ರ ಹೊರಬಿದ್ದಿವೆ ಅಷ್ಟೆ.

ಕ್ಯೂಬಾದಲ್ಲಿ ಸಶಸ್ತ್ರ ಹೋರಾಟ

ಕ್ಯೂಬಾದಲ್ಲಿನ ಎರಡು ದೊಡ್ಡ ನಗರಗಳಾದ ಹವಾನ ಮತ್ತು ಸಾಂಟಿಯಾಗೋದಲ್ಲಿ ಸಶಸ್ತ್ರ ಹೋರಾಟ ನಡೆಯುತ್ತಿದೆ. ಕ್ಯೂಬಾದಲ್ಲಿ ಎಲ್ಲೆಡೆಗಳಲ್ಲಿಯು ಗೊರಿಲ್ಲ ಕದನ ನಡೆಯುತ್ತಿದೆ. ಕ್ರಾಂತಿಕಾರೀ ಶಕ್ತಿಗಳ ಹೋರಾಟ ಮತ್ತು ಕಾರ್ಮಿಕರ ಮುಷ್ಕರಗಳು ಬಾಟಿಸ್ಟಾನ ಸರ್ವಾಧಿಕಾರ ಆಳ್ವಿಕೆಯನ್ನು ಬುಡಮೇಲು ಮಾಡುವ ಸ್ಥಿತಿಗೆ ತಂದಿದೆ. ಏಪ್ರಿಲ್ 2 ರಂದು ನಡೆದ ದೇಶಾದ್ಯಂತದ ಮುಷ್ಕರವು ಸರಕಾರದ ಅಸ್ತಿತ್ವಕ್ಕೆ ತೀವ್ರ ಧಕ್ಕೆ ತಂದಿದ್ದಿತೆಂದು, ಸರಕಾರದ ವಕ್ತಾರರೇ ತಿಳಿಸಿದ್ದಾರೆ.

ಗೊರಿಲ್ಲಾ ಪಡೆಗಳ ನಾಯಕ ಕಾಸ್ಟ್ರೋ ಬಾಟಿಸ್ಟಾನ ಸರ್ವಾಧಿಕಾರವನ್ನು ಕೊನೆಗಾಣಿಸಿ, ಚುನಾಯಿತ ಸರಕಾರವನ್ನು ಸ್ಥಾಪಿಸುವುದು, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದು, ಘಟನಾತ್ಮಕವಾದ ಹಕ್ಕುಗಳನ್ನು ಸ್ಥಾಪಿಸುವುದು, ಲಂಚ ರುಷುವತ್ತುಗಳನ್ನು ನಿರ್ಮೂಲಗೊಳಿಸುವುದು, ನಕ್ಷರತೆಯನ್ನು ನೀಗಿಸುವುದು ಮತ್ತು ದೇಶವನ್ನು ಶೀಘ್ರವಾಗಿ ಔದ್ಯೋಗೀಕರಣ ಮಾಡುವುದು ಕ್ರಾಂತಿಕಾರೀ ಶಕ್ತಿಗಳ ಉದ್ದಿಶ್ಯವಾಗಿದೆ ಎಂದು ಘೋಷಿಸಿದ್ದಾರೆ.

ಕ್ಯೂಬನ್ ಸೋಷಲಿಸ್ಟ್ ಪೀಪಲ್ಸ್ ಪಕ್ಷ (ಕಮ್ಯೂನಿಸ್ಟ್ ಪಕ್ಷ) ವು ಕ್ರಾಂತಿಕಾರರಿಗೆ ತನ್ನ ಸಂಪೂರ್ಣ ಬೆಂಬಲವನ್ನಿತ್ತಿದೆ ಮತ್ತು ಅವಕ್ಕೆ ಎಲ್ಲ ಸಹಾಯವನ್ನು ನೀಡುತ್ತಿದೆ.

ಅಮೆರಿಕದ ಗುತ್ತೇದಾರರು ಮತ್ತು ಕ್ಯೂಬಾದ ಪ್ಲಾಂಟರುಗಳು ದೇಶದ ಸಕ್ಕರೆ ತಯಾರಿಕೆಯನ್ನು ತಮ್ಮ ಹಿಡಿದಲ್ಲಿರಿಸಿಕೊಂಡು, ಬೇಕಾದಷ್ಟು ಲಾಭವನ್ನು ಮಾಡುತ್ತಿದ್ದಾರೆ. ಬಾಟಿಸ್ಟಾ ಸರಕಾರಕ್ಕೆ ಅವರು ಸಂಪೂರ್ಣ ಬೆಂಬಲವಿತ್ತಿದ್ದಾರೆ. ಕ್ಯೂಬಾದ ಜನತೆ ಈ ಗುತ್ತೆದಾರರ ಮತ್ತು ಪ್ಲಾಂಟರುಗಳ ತೀವ್ರ ಶೋಷಣೆಗೆ ಮತ್ತು ಬಾಟಿಸ್ಟಾನ ದಬ್ಬಾಳಿಕೆಗೆ ಒಳಗಾಗಿದ್ದಾರೆ. ಕೇವಲ 6 ಮಿಲಿಯ ಜನಸಾಂದ್ರತೆಯುಳ್ಳ ದೇಶದಲ್ಲಿ ಅರ್ಧ ಮಿಲಿಯ ನಿರುದ್ಯೋಗಿಗಳಿದ್ದಾರೆ.

ಅಮೆರಿಕನ್ ಗುತ್ತೇದಾರರ 775 ಮಿಲಿಯ ಡಾಲರುಗಳ ಬಂಡವಾಳವನ್ನು ರಕ್ಷಿಸುವುದೇ ಬಾಟಿಸ್ಟಾನ ಆಡಳಿತೆಯ ಕಾರ್ಯವಾಗಿದೆ. ಅಮೆರಿಕದ ವಿದೇಶಾಂಗ ಇಲಾಖೆಯು ಬಾಟಿಸ್ಟಾನೊಂದಿಗೆ ಗುಪ್ತವಾಗಿ ಒಪ್ಪಂದ ಮಾಡಿಕೊಂಡು, ಕ್ರಾಂತಿಕಾರರನ್ನು ದಮನ ಮಾಡಲು ನೆರವೀಯುವುದಾಗಿ ತಿಳಿದುಬಂದಿದೆ.

ಆದರೆ ಇಂದು ಬಾಟಿಸ್ಟಾನ ಆಳ್ವಿಕೆ ವಿರುದ್ಧ ಕ್ರಾಂತಿಕಾರಿ ಚಳವಳಿಯು ದೇಶಾದ್ಯಂತ ತೀವ್ರಗೊಳ್ಳುತ್ತಿದೆ. ವಾಷಿಂಗ್‌ಟನ್ನಿಂದ ಅಮೆರಿಕಾ ಸರಕಾರವು ಎಷ್ಟೇ ನೆರವಿತ್ತರೂ ಸಾರ್ಥಕವಾಗುವುದಿಲ್ಲ.

ಶಾಂತಿಯುತ ಸಾಧನೆ ಮತ್ತು ಮಾರ್ಕ್ಸ್‌ವಾದ

(೩ನೇ ಪುಟದಿಂದ)

ಕೆ ಹಾಸ್ಯಾಸ್ಪದವಾಗಿದೆಂದು ನಾವು ವಿಷಾದದಿಂದ ಹೇಳಬೇಕಾಗಿದೆ.

ಕಮ್ಯೂನಿಸ್ಟ್ ಪಾರ್ಟಿಯ ಈ ಹೊಸ ಧೋರಣೆ ಪ್ರಾಮಾಣಿಕವಲ್ಲ, ಅದೊಂದು ಕಪಟ ನೀತಿಯೆಂದೂ, ಜನರನ್ನು ಮೋಸಗೊಳಿಸಲು ಹೂಡಿರುವ ತಂತ್ರವೆಂದೂ ಆರೋಪಿಸಲಾಗಿದೆ. ಇದಕ್ಕೆ ಚರಿತ್ರೆಯೇ ಜವಾಬು ಕೊಡವುದು. ತಾನು ಘೋಷಿಸಿದ್ದನ್ನು ಕಾಯಾ ಚರಣೆಗೆ ತರುವ ಪಾರ್ಟಿ ಕಮ್ಯೂನಿಸ್ಟ್ ಪಾರ್ಟಿಯೆಂದು ಈಗ ಸಾಮಾನ್ಯವಾಗಿ ಪ್ರಸಿದ್ಧಿಯಾಗಿದೆ. ಕಾಂಗ್ರೆಸ್ ನಾಯಕರ ಈ ಪ್ರತಿಕ್ರಿಯೆಗೆ ಒಂದು ಕಾರಣವಿದೆ. ಯಾವುದೇ ವ್ಯಕ್ತಿ ಕಂಗಾಲಾಗಿ ಸಿಟ್ಟಿಗೆದ್ದಾಗ ಅವನ ವಿವೇಚನಾ ಶಕ್ತಿ ಮಂದವಾಗುತ್ತದೆ ಮತ್ತು ಸತ್ಯಾಂಶಗಳ ಬಗ್ಗೆ ಗಮನವಿರುವುದಿಲ್ಲ. ಶ್ರೀ ಧೇಬರ್‌ರವರಿಗೆ ಸದ್ಯ ಈ ಗತಿಯಾಗಿದೆಂದು ಕಾಮ್ರೇಡ್ ಅಜಯ ಘೋಷ್‌ರವರು ಅಭಿಪ್ರಾಯಪಟ್ಟಿದ್ದಾರೆ. ಧೇಭರ್ ಎಷ್ಟು ಅಪಪ್ರಚಾರ ಮಾಡಿದರೂ, ಅವಹೇಳನ ಮಾಡಿದರೂ ನಮ್ಮ ಪಾರ್ಟಿಯು ಬೆಳೆಯುತ್ತಲೇ ಇದೆ. ಅದರ ವರ್ಚಸ್ಸು ಹೆಚ್ಚುತ್ತಿದೆ. ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟು ಹೆಚ್ಚಾಗುತ್ತಿದ್ದು ಅದರ ಬಲ ಮತ್ತು ವರ್ಚಸ್ಸು ಕುಗ್ಗುತ್ತಿರುವುದೂ ಸರ್ವವಿಧಿತವಾಗಿದೆ. ಕಮ್ಯೂನಿಸ್ಟ್ ಪಾರ್ಟಿಯ ಬಗ್ಗೆ ಸುಳ್ಳು ಪ್ರಚಾರ ನಡೆಸಿ, ಜನರ ಕಣ್ಣಿಗೆ ಮಣ್ಣೆರಚಿ ಗೊಂದಲವುಂಟುಮಾಡಲು ಪ್ರಯತ್ನಿಸಿದಂತಿದೆ ಕಾಂಗ್ರೆಸ್ ಅಧ್ಯಕ್ಷರು. ಈ ಪ್ರಯತ್ನ ವಿಫಲವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಅಮೃತಸರದಲ್ಲಿ ತೀರ್ಮಾನಿಸಿದ ಮಾರ್ಗದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಮುಂದುವರಿದು ಜಯಗಳಿಸುವುದು ಖಂಡಿತ.

ದೇವಿಕುಲಂ ಉಪಚುನಾವಣೆಗೆ ಉದಾರ ಸಹಾಯ ನೀಡಿರಿ

ದೇವಿಕುಲಂ ಉಪಚುನಾವಣೆಯು ಬಹು ಮುಖ್ಯವಾದ ಚುನಾವಣೆಯಾಗಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ಸು ಹೇಗಾದರೂ ಜಯ ಗಳಿಸಬೇಕೆಂದು ಬೇಕಾದಷ್ಟು ಹಣ ಖರ್ಚು ಮಾಡುತ್ತಿದೆ. ದೊಡ್ಡ ದೊಡ್ಡ ಪ್ಲಾಂಟರುಗಳು, ಚರ್ಚುಗಳೂ ಮತ್ತು ಪ್ರತಿಗಾಮಿಗಳು ಅವರ ನೆರವಿಗೆ ಬಂದಿದ್ದಾರೆ. ಪ್ರತಿಗಾಮಿಗಳೆಲ್ಲರೂ ಒಂದಾಗಿ ಕಮ್ಯೂನಿಸ್ಟ್ ಉಮೇದುವಾರರಾದ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರನ್ನು ಚುನಾವಣೆಯಲ್ಲಿ ಸೋಲಿಸಲು ಯತ್ನಿಸುತ್ತಿದ್ದಾರೆ. ಅವರ ಯತ್ನ ಸಫಲವಾಗುವುದು ಅಷ್ಟು ಸುಲಭ ಸಾಧ್ಯವಲ್ಲವೆಂಬುದು ಎಲ್ಲರಿಗೂ ತಿಳಿದಿದೆ.

ಈ ಉಪ ಚುನಾವಣೆಯಲ್ಲಿ ಹೋರಾಡಲು ಕೇರಳ ಕಮ್ಯೂನಿಸ್ಟ್ ಪಾರ್ಟಿಗೆ ಎಲ್ಲ ರೀತಿಯಲ್ಲಿಯು ನೆರವು ನೀಡುವುದು ಅಗತ್ಯ. ಕೇರಳ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎಂ. ಎನ್. ಗೋವಿಂದನ್ ನಾಯರ್‌ರವರು ಉಪಚುನಾವಣೆಗಾಗಿ ಹಣ ಸಹಾಯ ಮಾಡಲು ಮನವಿ ಮಾಡಿಕೊಂಡಿದ್ದಾರೆ. ಈಗಾಗಲೇ ಭಾರತ ನಾನಾ ಭಾಗಗಳಿಂದ ಹಣ ಮತ್ತು ಇತರ ನೆರವನ್ನು ಕಳಿಸಲಾಗುತ್ತಿದೆ ಚುನಾವಣೆ ಇನ್ನು ಕೆಲವೇ ದಿನಗಳಿರುವುದರಿಂದ ಹಣ ಕಳಿಸುವವರು ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕೆಂದು ವಿನಂತಿಸುತ್ತೇವೆ. ಮತ್ತು 'ಜನಶಕ್ತಿ'ಗೆ ವರದಿ ಕಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

ವಿಳಾಸ :—

ಕಾಮ್ರೇಡ್ ವಿ. ಎಸ್. ಅಚ್ಚುತಾನಂದನ್, ಕಾರ್ಯದರ್ಶಿ. ಕಮ್ಯೂನಿಸ್ಟ್ ಪಾರ್ಟಿ ಚುನಾವಣಾ ಸಮಿತಿ, ಮನ್ನಾರ್, ಕೊಟ್ಟಾಯಂ ಜಿಲ್ಲೆ, ಕೇರಳ.

ಬೆಂಗಳೂರಿನಲ್ಲಿ ಸ್ಟುಡಿಯೋ

ಗಣಿ ಮಾಲೀಕರಾದ ಚಿತ್ರದುರ್ಗದ ಡಾ॥ ಎಂ. ರಾಮದಾಸ್ ಅವರ ಪ್ರಯತ್ನದ ಫಲಸ್ವರೂಪವಾಗಿ ಶೀಘ್ರದಲ್ಲೇ ಬೆಂಗಳೂರಿನಲ್ಲಿ ಒಂದು ಪರಿಪೂರ್ಣವಾದ ಸ್ಟುಡಿಯೊ ಸ್ಥಾಪನೆಯಾಗಲಿದೆ.

ಡಾ॥ ರಾಮದಾಸ್ ಅವರು ಬೆಂಗಳೂರು ಸರ್ಜಾಪುರ ರಸ್ತೆಯಲ್ಲಿ, ಲಾಲಾಬಾಗಿಗೆ ಸುಮಾರು ಮೂರು ಮೈಲಿ ದೂರದಲ್ಲಿ ಪ್ರಕೃತ್ತಿ ಸಿರಿಸಂಪನ್ನವಾದ ಪ್ರದೇಶದಲ್ಲಿ ೪೦ ಎಕರೆ ಜಮೀನಿನಲ್ಲಿ ಸ್ಟುಡಿಯೋ ಸ್ಥಾಪನೆಗೆ ವ್ಯವಸ್ಥೆ ಗೊಳಿಸಿದ್ದಾರೆ.

ಆರಂಭದಲ್ಲಿ ಎರಡು ರಂಗಗಳು ಮಾತ್ರ ನಿರ್ಮಾಣ ಮಾಡಲಿದ್ದಾರೆ. ಸ್ಟುಡಿಯೋವಿಗೆ ಅಗತ್ಯವಾದ ಸಲಕರಣೆಗಳನ್ನು ಕೊಂಡುಬರಲು ಶ್ರೀಯುತರು ಮುಂಬೈಗೆ ತೆರಳಲಿದ್ದಾರೆ. 'ಓಂಕಾರ್ ಸ್ಟುಡಿಯೋ' ಎಂದು ಅದಕ್ಕೆ ನಾಮಕರಣ ಮಾಡಲಾಗಿದೆ. ಅಕ್ಟೋಬರ್ ತಿಂಗಳಲ್ಲಿ ಸಂಪೂರ್ಣವಾಗಿ ಸಜ್ಜಾಗುವ ನಿರೀಕ್ಷೆ ಇದೆ.

ಓದುಗರ ಓಲೆ

(೭ನೇ ಪುಟದಿಂದ)

ನ್ನ ಕುರಿದುಡ್ಡು ಕೊಡಿಸಿಕೊಡುತ್ತೇನೆ, ನಾಚಗುಂಟೆ ಗ್ರಾಮಕ್ಕೆ ಬಾ ಎಂದು ಕರೆದ. ಪಾಪಯ್ಯ ನಿರಾಕರಿಸುತ್ತಲೇ 'ನಿನ್ನ ಹಣೆಬರಹಕ್ಕೆ ನಾವೇನು ಮಾಡೋಣವೆಂದು' ಕೋಪಿಸಿಕೊಂಡು ಹೋದರಂತೆ. ಇದಾದ ಕೊಂಚ ಹೊತ್ತಿನಲ್ಲೆ ಸ್ಟೇಷನ್‌ಗೆ ಹೋಗಿದ್ದ ಹುರಿಯಾಳುಗಳು ಊರಿಗೆ ಹಿಂದಿರುಗಿದರಂತೆ. ನಾಲ್ಕೈದು ಮನೆಯಿರುವ ಗ್ರಾಮದಲ್ಲಿ ಒಂಟಿಯಾಗಿರುವ ಪಾಪಯ್ಯನ ಸ್ಥಿತಿ ಮತ್ತಷ್ಟು ಚಿಂತಾಜನಕವಾಯಿತು. 'ಸಮ್ಮಾ ಪೋಯಾ ಶನಿ ಪಟ್ಟಿ' ಅಂತು ಮರುದಿನವೇ ದಿಕ್ಕುತೋಚದಂತಾಯಿತು. ಆತ ದೊಡ್ಡಬಳ್ಳಾಪುರಕ್ಕೆ ಬಂದು ದಿನವೆಲ್ಲಾ ಕಾದು ಆತನಿಗೆ ಪರಿಚಯಸ್ತರಾಗಿದ್ದ ತಾಲ್ಲೂಕು ರೈತ ಸಂಘದ ಅಧ್ಯಕ್ಷರಲ್ಲಿ ಕೂಲಂಕುಶವಾಗಿ ವಿಚಾರ ತಿಳಿಸಿದ ಮೇಲೆ, ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಅರ್ಜಿಯೊಂದನ್ನು ಕೊಡಿಸಿ, ಅದರ ಕಾಪಿಯನ್ನು ಬೆಂಗಳೂರು ಡಿಸ್ಟ್ರಿಕ್ಟ್ D. S. P.ಯವರಿಗೂ ಅಲ್ಲದೆ ಕ್ಷೇತ್ರದ ಅಸೆಂಬ್ಲಿ ಸದಸ್ಯರಾದ ಮಾನ್ಯ ಶ್ರೀ ಟಿ. ಸಿದ್ದಲಿಂಗಯ್ಯನವರಿಗೂ ತಿಳಿಸಿದ್ದಾರೆಂದು ತಿಳಿದು ಬಂದಿದೆ. ಪೋಲೀಸ್ ಉನ್ನತಾಧಿಕಾರಿಗಳು ಕೂಡಲೇ ಸ್ಥಳಕ್ಕೆ ಹೋಗಿ ವಿಚಾರಣೆ ನಡೆಸಿ ಉದಾಸೀನ ಮಾಡಿರುವ ಬೆಳವಂಗಳದ ರೇಂಜ್ ಇನ್ಸ್‌ಪೆಕ್ಟರ್‌ರವರ ಮೇಲೆ ಸೂಕ್ತಕಾರ್ಯಕ್ರಮ ತೆಗೆದುಕೊಂಡು ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುತ್ತಾರೆಂದು ನಂಬಿರುತ್ತೇವೆ.

ಏಜಂಟರಲ್ಲಿ ವಿನಂತಿ

ಏಜಂಟರುಗಳು ಬಿಲ್ಲಿನ ಹಣವನ್ನು ಈ ತಿಂಗಳ 10ನೇ ತಾರೀಕಿನೊಳಗಾಗಿ ಪೂರ್ತ ಸಂದಾಯ ಮಾಡಬೇಕು. ಹಿಂದಿನ ಬಾಕಿ ಉಳಿಸಿಕೊಂಡಿರುವವರು 10ನೇ ತಾರೀಕಿನೊಳಗೆ ಹಣ ಕಳಿಸದಿದ್ದಲ್ಲಿ ಏಜನ್ಸಿ ರದ್ದುಗೊಳಿಸಲಾಗುದೆಂದು ಈ ಮೂಲಕ ತಿಳಿಸುತ್ತೇವೆ. ಎಲ್ಲ ಏಜಂಟರುಗಳು ತಪ್ಪದೆ ಹಣವನ್ನು ಸಕಾಲದಲ್ಲಿ ಕಳಿಸುವರೆಂದು ನಂಬಿದ್ದೇವೆ.

ಚಂದಾದಾರರಲ್ಲಿ ವಿನಂತಿ

'ಜನ ಶಕ್ತಿ' ಚಂದಾದಾರರಿಗೆ ಚಂದಾ ಮುಗಿಯುವುದಕ್ಕೆ ಎರಡು ವಾರ ಮುಂಚೆಯೇ ತಿಳಿಸಲಾಗಿರುತ್ತದೆ. ಚಂದಾ ಹಣವು ಮುಗಿದಿರುವವರು, ಕೂಡಲೇ ಚಂದಾ ಹಣವನ್ನು ಕಳಿಸಿ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ವ್ಯವಸ್ಥಾಪಕರು.

ಸುದ್ದಿ ಸಂಗ್ರಹ

ಬೆಂಗಳೂರು—

ಯಶವಂತಪುರ ಹಂಚಿನ ಕಾರ್ಖಾನೆ ಲಾಕ್ ಔಟ್

ಯಶವಂತಪುರದಲ್ಲಿರುವ ಹಂಚಿನ ಕಾರ್ಖಾನೆಯನ್ನು ಮಾಲಿಕರು ಏಪ್ರಿಲ್ 28 ರಿಂದ ಲಾಕ್ ಔಟ್ ಮಾಡಿದ್ದಾರೆ. ಇದರ ಪರಿಣಾಮ ೨೦೦ ಮಂದಿಗೆ ಉದ್ಯೋಗವಿಲ್ಲವಾಗಿದೆ.

ಮಾಲಿಕರು ಟ್ರಿಬ್ಯೂನಲ್ ಅವಾರ್ಡನ್ನು ಮತ್ತು ಸ್ಟಾಂಡಿಂಗ್ ಆರ್ಡರನ್ನು ಜಾರಿಗೆ ತರದೆ, ಕೆಲಸಗಾರರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದರು. ಅಷ್ಟೇ ಅಲ್ಲದೆ ಈ ಬಗ್ಗೆ ಅಸಿಸ್ಟೆಂಟ್ ಲೇಬರ್ ಕಮಿಶನರ್ ಸಮ್ಮುಖದಲ್ಲಿ ಕನ್ಸಿಲಿಯೇಶನ್ ನಡೆಯುತ್ತಿದ್ದಾಗಲೇ ಕಾರ್ಖಾನೆಯಿಂದ 50 ಮಂದಿ ನೌಕರರನ್ನು ಮಾಲೀಕರು ಕೆಲಸದಿಂದ ತೆಗೆದುಹಾಕಿದರು. ಮಾಲಿಕರ ಈ ನೀತಿಯ ವಿರುದ್ಧ ಕೆಲಸಗಾರರು ಪ್ರತಿಭಟಿಸಿದರು. ಮಾಲಿಕರು ಸಂದರ್ಭ ಸಾಧಿಸಿ ಕಾರ್ಖಾನೆ ಲಾಕ್ ಔಟ್ ಮಾಡಿದ್ದಾರೆ. ಲೇಬರ್ ಕಮಿಶನರ್‌ರವರು ಫ್ಯಾಕ್ಟರಿಗೆ ಭೇಟಿ ಇತ್ತು ಲಾಕ್ ಔಟ್ ತೆಗೆಯುವಂತೆ ಮಾಲಿಕರಿಗೆ ತಿಳಿಸಿದರೂ, ಮಾಲಿಕರು ನಿರಾಕರಿಸಿದ್ದಾರೆ.

ಡಾ॥ ಸಿ. ವಿ. ರಾಮನ್ ಮಾಸ್ಕೋಗೆ

ಭಾರತದ ಪ್ರಖ್ಯಾತ ವಿಜ್ಞಾನಿ ಡಾ॥ ಸಿ. ವಿ ರಾಮನ್‌ರವರು ಮುಂದಿನ ವಾರ ಲೆನಿನ್ ಶಾಂತಿ ಪಾರಿತೋಷಕವನ್ನು ಸ್ವೀಕರಿಸಲು ಮಾಸ್ಕೋಗೆ ತೆರಳಲಿದ್ದಾರೆ. ಡಾ॥ ರಾಮರ್ 28 ವರ್ಷಗಳ ನಂತರ ಸೋವಿಯತ್ ರಷ್ಯಕ್ಕೆ ಭೇಟಿಯಿಯಾಯುತ್ತಿದ್ದಾರೆ.

ಕಳೆದ ಭಾನುವಾರ 27ರಂದು ಡಾ॥ ರಾಮರ್‌ರವರ ಗೌರವಾರ್ಥವಾಗಿ, ಮಾಸ್ಕೋಗೆ ಸುಖಪ್ರಯಾಣ ಕೋರಲು ಮೈಸೂರು ಸರಕಾರದವರು ರೆಸಿಡೆನ್ಸಿ ಭವನದಲ್ಲಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ನಗರದ ಗಣ್ಯ ವ್ಯಕ್ತಿಗಳು, ಶಾಸನ ಸಭಾ ಸದಸ್ಯರೂ, ಸಚಿವರುಗಳೂ ಈ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದ್ದರು. ಮೈಸೂರು ರಾಜ್ಯ ಸರಕಾರದ ಪರವಾಗಿ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸೋವಿಯತ್ ಯೂನಿಯನ್‌ನಲ್ಲಿ ಅತ್ಯಂತ ಉನ್ನತ ಪ್ರಶಸ್ತಿಯಾದ ಲೆನಿನ್ ಪ್ರಶಸ್ತಿಯನ್ನು ಡಾ॥ ರಾಮನ್‌ರವರಿಗೆ ಸಲ್ಲಿಸಿರುವುದು, ಭಾರತಕ್ಕೆ ಸಲ್ಲಿಸಿದ ಗೌರವವಾಗಿದೆ ಎಂದು ತಿಳಿಸಿ, ಅವರಿಗೆ ಸುಖಪ್ರಯಾಣ ಕೋರಿದರು.

ಡಾ॥ ರಾಮರ್‌ರವರೊಂದಿಗೆ ಅವರ ಪತ್ನಿ ಶ್ರೀಮತಿ ಲೋಕ ಸುಂದರಿ ರಾಮರ್‌ರವರೂ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಡೈರೆಕ್ಟರ್ ಡಾ॥ ಭಗವಂತಂರವರೂ ಮಾಸ್ಕೋಗೆ ತೆರಳಲಿದ್ದಾರೆ.

'ಜನಶಕ್ತಿ' ಅವರಿಗೆ ಸುಖಪ್ರಯಾಣವನ್ನು ಕೋರುತ್ತದೆ.

ಮೈಸೂರು ರಾಜ್ಯ ಪತ್ರಿಕೋದ್ಯೋಗಿ ಸಂಘದ

ಸರ್ವ ಸದಸ್ಯರ ಸಭೆ

ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಸಭೆ, ಸಂಘದ ಅಧ್ಯಕ್ಷ ಶ್ರೀ ಎಸ್. ಎಸ್. ಸೀತಾರಾಮ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಏಪ್ರಿಲ್ 27 ಭಾನುವಾರ ನಡೆಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಎಸ್. ಸೂರ್ಯನಾರಾಯಣ ಅವರು ೫೭–೫೮ನೇ ಸಾಲಿನ ವರದಿಯನ್ನು ಮಂಡಿಸಿದರು. ಖಜಾಂಚಿ ಶ್ರೀ ಬಿ. ಶ್ರೀನಿವಾಸ ಮೂರ್ತಿಯವರು ಅದೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳನ್ನು ಮಂಡಿಸಿದರು. ಚರ್ಚೆಯ ನಂತರ ಸಭೆ ವರದಿ ಹಾಗೂ ಲೆಕ್ಕಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಅಖಿಲ ಭಾರತ ಕಾರ್ಯನಿರತ ಪತ್ರಿಕೋದ್ಯೋಗಿಗಳ ಫೆಡರೇಷನ್ನಿನ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಸ್. ವಿ. ಜಯಶೀಲ ರಾವ್ ಅವರು ದೆಹಲಿಯಲ್ಲಿ ನಡೆದ ಫೆಡರೇಷನ್ನಿನ ಕಾರ್ಯನಿರ್ವಾಹಕ ಕೌನ್ಸಿಲ್ ಸಭೆಯ ತೀರ್ಮಾನಗಳ ಬಗ್ಗೆ ಇತ್ತ ವರದಿ, ಪತ್ರಿಕೋದ್ಯೋಗಿಗಳ ವೇತನ ನಿರ್ಧಾರ ಸಂಬಂಧದಲ್ಲಿ ದೆಹಲಿಯಲ್ಲಿ ನಡೆಯುತ್ತಿರುವ ತ್ರಿಪಕ್ಷ ಸಮ್ಮೇಳನ, ಮತ್ತಿತರ ವೃತ್ತಿ ಸಂಬಂಧ ವಿಷಯಗಳನ್ನು ಸಭೆ ಚರ್ಚಿಸಿತು.

ರಾಜ್ಯದ ಪತ್ರಿಕೋದ್ಯೋಗಿಗಳ ಸಂಘದ ನೂತನ ಅಧಿಕಾರ ವರ್ಗವನ್ನು ನಂತರ ಚುನಾಯಿಸಲಾಯಿತು.

ಅಧ್ಯಕ್ಷರು: ಶ್ರೀ ಪೋರ್ತ ಜೋಸೆಫ್

ಉಪಾಧ್ಯಕ್ಷರು: ಶ್ರೀ ಇ. ಆರ್. ಸೇತೂರಾಂ (ಪ್ರಜಾವಾಣಿ).

ಪ್ರಧಾನ ಕಾರ್ಯದರ್ಶಿ: ಶ್ರೀ ಎಸ್. ಗುಂಡಪ್ಪ (ಡೆಕ್ಕನ್ ಹೆರಾಲ್ಡ್). ಕಾರ್ಯದರ್ಶಿ: ಶ್ರೀ ಸಿ. ಆರ್. ಕೃಷ್ಣರಾವ್ (ಜನಶಕ್ತಿ).

ಖಜಾಂಚಿ: ಶ್ರೀ ಎಚ್. ಎಸ್. ಸೂರ್ಯನಾರಾಯಣ (ಪ್ರಜಾವಾಣಿ).

ಕಾರ್ಯನಿರ್ವಾಹಕ ಸಮಿತಿ ಸದಸ್ಯರು: ಶ್ರೀಗಳಾದ ಎಚ್. ಆರ್. ನಾಗೇಶರಾವ್ (ತಾಯಿನಾಡು), ಟಿ. ದಾಸಪ್ಪ (ಪ್ರಜಾವಾಣಿ) ಮತ್ತು ಬಿ. ಶ್ರೀನಿವಾಸ (ಜನಪ್ರಗತಿ).

ಸದಸ್ಯತ್ವ ಅರ್ಹತಾ ಪರಿಶೀಲನಾ ಸಮಿತಿಗೆ ಕೆಳಗೆ ಕಂಡವರು ಚುನಾಯಿತರಾದರು.

ಶ್ರೀಗಳಾದ ಕೆ. ಎಸ್. ನಾರಾಯಣ ಸ್ವಾಮಿ (ಪ್ರಜಾವಾಣಿ) ಡಿ. ಎಸ್. ಗುರುರಾಜಾ ರಾವ್ (ಡೆಕ್ಕನ್ ಹೆರಾಲ್ಡ್) ಎಸ್. ವ್ಯಾಸ ರಾವ್ (ತಾಯಿನಾಡು)

ನೂತನ ಅಧಿಕಾರ ವರ್ಗದ ಅಭಿನಂದನೆ, ನಿವೃತ್ತ ಅಧಿಕಾರ ವರ್ಗದ ವಂದನೆಗಳ ನಂತರ ಸಭೆ ಮುಕ್ತಾಯವಾಯಿತು.

ದೊಡ್ಡಬಳ್ಳಾಪುರ

ಪವರ್‌ಲೂಂ ಕಾರ್ಮಿಕರ ಸಭೆ

19–4–58ರ ಶನಿವಾರದಂದು ಸಂಜೆ ಪವರ್‌ಲೂಂ ಕಾರ್ಮಿಕರ ಬಹಿರಂಗ ಸಭೆಯು ಸಂಘದ ಅಧ್ಯಕ್ಷರೂ ಹಾಗೂ ದೊಡ್ಡಬಳ್ಳಾಪುರ ರೈತಸಂಘದ ಅಧ್ಯಕ್ಷರೂ ಆದ ಶ್ರೀ ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಬೆಂಗಳೂರಿನ ಟ್ರೇಡ್ ಯೂನಿಯನ್ ನಾಯಕರುಗಳಾದ ಶ್ರೀ ಎಂ.ಎಸ್. ರಾಮರಾವ್, ಎಸ್. ಸೂರ್ಯನಾರಾಯಣರಾವ್, ಮತ್ತು ಐ. ಮರಿದಾಸ್‌ರವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಕಾರ್ಮಿಕರು ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕೆಂದೂ, ತಮ್ಮ ಕುಂದುಕೊರತೆಗಳನ್ನು ನೀಗಿಸಿ ಕೊಳ್ಳಬೇಕೆಂದು ತಿಳಿಸಿದರು. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ 12-14 ಘಂಟೆ ಕೆಲಸಗಾರರನ್ನು ದಬ್ಬಾಳಿಕೆಯಿಂದಿ ದುಡಿಸುವುದನ್ನು ಖಂಡಿಸಿದರು. ಲೇಬರ್ ಇನ್‌ಸ್ಪೆಕ್ಟರರು ಈ ಬಗ್ಗೆ ತಲೆದಿರುವ ಅನಾದರಣೆ ಧೋರಣೆಯನ್ನು ಖಂಡಿಸಿದರು. ಕಾರ್ಮಿಕರು ಒಗ್ಗಟ್ಟಿನಿಂದ ಬಲವಾದ ಸಂಘವನ್ನು ನಿರ್ಮಿಸಬೇಕೆಂದು ತಿಳಿಸಿದರು.

ಸಂಘದ ಕಾರ್ಯದರ್ಶಿಯವರಾದ ಶ್ರೀ ಡಿ. ವಿ. ಗಂಗಾಧರ್‌ರವರು ವಂದನಾರ್ಪಣೆ ಮಾಡಿದರು.

ಬಹಿರಂಗ ಸಭೆಯಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆ ಉಚಿತವಾಗಿ ಎಲೆಕ್ಟ್ರಿಕ್ ಕಂಟ್ರಾಕ್ಟರ್ ಕೆ. ಆದಿನಾರಾಯಣಪ್ಪನವರಿಂದ ಏರ್ಪಡಿಸಿದ್ದಿತು ಮತ್ತು ಜೈ ಮಾರುತಿ ಸೌಂಡ್ ಸಿಸ್ಟಂನವರು ಕೂಡ ಉಚಿತವಾಗಿ ಲೌಡ್‌ಸ್ಪೀಕರ್ ವ್ಯವಸ್ಥೆ ಮಾಡಿದ್ದರು ಇವರೆಲ್ಲರಿಗೂ ಈ ಮೂಲಕ ಕಾರ್ಮಿಕ ಸಂಘದ ಪರವಾಗಿ ವಂದನೆಗಳನ್ನರ್ಪಿಸುತ್ತೇವೆ

ಗುಲ್ಬರ್ಗ—

ಚಿತ್ತಾಪುರದಲ್ಲಿ ರೈತರ ಪ್ರದರ್ಶನ

ಏಪ್ರಿಲ್ 24ರಂದು ಚಿತ್ತಾಪುರ ತಾಲ್ಲೂಕಿನಲ್ಲಿ ರೈತರ ಭಾರೀ ಪ್ರದರ್ಶನವು ಸರಕಾರದ ಕಂದಾಯ ವಸೂಲಿಯ ನೀತಿ ವಿರುದ್ಧ ಜರುಗಿತು. ಸುತ್ತಮುತ್ತಲು ಗ್ರಾಮಗಳಿಂದ ಅನೇಕ ರೈತರು ಪ್ರದರ್ಶನದಲ್ಲಿ ಭಾಗವಹಿಸಲು ಆಗಮಿಸಿದ್ದರು.

ಚಿತ್ತಾಪುರ ಜಿಲ್ಲೆಯಲ್ಲಿ ಮಳೆ ಸಕಾಲಕ್ಕೆ ಬಾರದೆ ಬೆಳೆಗಳ ನಷ್ಟವಾಗಿದೆ. ಕಳೆದ ವರ್ಷಗಳಲ್ಲಿ ಸಹ ಇದೇ ರೀತಿಯಾಗಿದೆ. ಕಂದಾಯವನ್ನು ವಸೂಲಿ ಮಾಡದೆ ಬೆಳೆಯ ನಷ್ಟದಿಂದಾಗಿ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡಬೇಕೆಂದು ರೈತರೂ ಮತ್ತು ತಾಲ್ಲೂಕು ರೈತ ಸಂಘವೂ ಸರಕಾರದಲ್ಲಿ ಮನವಿ ಮಾಡಿಕೊಂಡಿದೆ. ಕಂದಾಯದ ರೆಮಿಷನ್ ಅತ್ಯಂತ ಜರೂರಾಗಿ ರೈತರಿಗೆ ಅಗತ್ಯವಾಗಿದೆ. ಆದರೆ ಸರಕಾರವು ರೈತರ ಮನವಿಗೆ ಓಗೊಡದೆ ಬಲಾತ್ಕಾರದಿಂದ ಕಂದಾಯ ವಸೂಲಿ ಮಾಡುತ್ತಿದೆ. ರೈತರ ಮೇಲೆ ಪೋಲೀಸು ಜುಲುಂ ನಡೆಯುತ್ತಿದೆ. ರೈತ ಸಂಘವು ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ರೆವಿನ್ಯೂ ಸಚಿವರಿಗೂ ಈ ಬಗ್ಗೆ ಅರ್ಜಿಗಳನ್ನು ಇತ್ತಿದೆ.

ಸರಕಾರದ ಈ ಜುಲುಂ ನೀತಿಯನು ಪ್ರತಿಭಟಿಸಿ ರೈತರು ಪ್ರದರ್ಶನ ನಡೆಸಿದ್ದಾರೆ. ಏಪ್ರಿಲ್ 24ರಂದು ನಡೆದ ಸಭೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಶ್ರೀ ಶರಣಪ್ಪ ಭೈರಿ ಮತ್ತು ಶಿವಲಿಂಗಪ್ಪ ಹುಗಾರ ಇವರು ಮಾತನಾಡಿ, ತಮ್ಮ ಸಂಕಷ್ಟಗಳನ್ನು ನೀಗಿಸಿಕೊಳ್ಳಲು ರೈತರು ಐಕ್ಯತೆಯಿಂದ ಹೋರಾಟ ನಡೆಸಬೇಕೆಂದು ಕರೆಯಿತ್ತರು.

ಓದುಗರ ಓಲೆ

ದೊಡ್ಡಬೆಳವಂಗಳದ ರೇಂಜ್ ಪೋ. ಸಬ್ ಇನ್ಸ್‌ಪೆಕ್ಟರರ ಅನಾದರಣೆ

ದೊಡ್ಡಬಳ್ಳಾಪುರದ ತಾಲ್ಲೂಕು ಸಾಸಲು ಹೋಬಳಿ ಚಿಕ್ಕಗುನ್ನಾನಹಳ್ಳಿ ಗ್ರಾಮದ ನಿವಾಸಿ ಪಾಪಯ್ಯ ಎನ್ನುವವರು ತಾ. 14—4—58ನೇ ಸೋಮವಾರ ಮೇಯಿಸಲು ಕೆರೆಗೆ ಹೊಡೆದುಕೊಂಡು ಹೋದ ಕುರಿಮಂದೆಯಲ್ಲಿ ಮೂರು ಕುರಿಗಳು ಕಳವಾಗಿ ಆ ದಿನ ಪೂರಾ ರಾತ್ರಿಯೆಲ್ಲಾ ಹಳ್ಳಿ, ಹಳ್ಳಿ, ಸುತ್ತಾಡಿ ಬಂದು ಮಂಗಳವಾರ ಬೆಳಿಗಾಗುವಾಗ್ಗೆ ಒಡ್ಡರಪಾಳ್ಯದ ಬಳಿ ಅಪ್ಪನ ಬೋಯಿ ಹುಲ್ಲುವಾಮೆಯಲ್ಲಿ ಒಂದು ಕುರಿ ಕತ್ತು ಕಿರುವಿ ಹಾಕಿದ್ದು ಪತ್ತೆಮಾಡಿದರು, ಮತ್ತೊಂದು ಕುರಿಯನ್ನು ಕತ್ತರಿಸಿ ಗಂಟುಕಟ್ಟಿ ನೇರಳೆ ಮರದ ಭಾವಿ (ಅಡಲು)ಯಲ್ಲಿ ನೀರಿನ ಮೇಲೆ ತೇಲುತ್ತಿದ್ದುದು ಪತ್ತೆಯಾಯಿತು. ವಿಚಾರ ಬಾನವತಿ ಪಂಚಾಯಿತಿ ಚೇರ್ಮನ್ನರಿಗೆ ತಿಳಿಸಲಾಗಿ, ರಿಪೋರ್ಟು ಬರೆದು ಆ ಊರಿಗೆ ಆ ದಿನ ಬಂದಿದ್ದ ಸಾಸಲು ದಫೆದಾರರಿಗೆ ಕೊಟ್ಟು ಸ್ಥಳಕ್ಕೆ ಕರೆದುಕೊಂಡು ಬಂದರು. ಸಿಕ್ಕಿರುವ ಮಾಲನ್ನು ಜೋಪಾನವಾಗಿ ನೋಡಿಕೊಳ್ಳಿ, ಬೆಳವಂಗಳದ ರೇಂಜ್ ಆಫೀಸಿಗೆ ಸಮಾಚಾರ ಮುಟ್ಟಿಸಿ ಬರುತ್ತೇವೆಂದು ಹೇಳಿ ಹೋದರು. ನಾಲ್ಕು ದಿನವಾದರೂ ಬರಲಿಲ್ಲ.

ಕುರೀನೂ ಕಳಕೊಂಡು ಸಾಕಾದ ಮೇಲೆ ಸದರಿ ಪಾಪಯ್ಯ ಪೋಲೀಸ್ ಆಫೀಸಿಗೆ ಹೋಗಿ ಸಬ್ ಇನ್ಸ್‌ಪೆಕ್ಟರು ಸಾಹೇಬರನ್ನು ಬರಲು ಪ್ರಾರ್ಥನೆ ಸಲ್ಲಿಸಿದ, ಸಾಹೇಬರು ರೇಗಾಡಿ ಗುಮಾಸ್ತರನ್ನ ಕಳಿಸುವುದಾಗಿ ಹೇಳಿದರು. ಬಡಪಾಪಯ್ಯ ದೊಡ್ಡಬಳ್ಳಾಪುರಕ್ಕೆ ಬಂದು ಕಾರು ಒಂದನ್ನು ತೆಗೆದುಕೊಂಡು ರೇಂಜು ಆಫೀಸಿಗೆ ಹೋಗಿ ಭಕ್ತಿ ಪೂರ್ವಕವಾದ ಪ್ರಾರ್ಥನೆ ಸಲ್ಲಿಸಿದ ಮೇಲೆ ಸ್ವಾಮಿಯವರು ಹರ್ಷಚಿತ್ತರಾಗಿ ಸ್ಥಳಕ್ಕೆ ದಯಮಾಡಿಸಿ ಮಹಜರ್ ಕ್ರಮ ಜರುಗಿಸಿ ಚರ್ಮವನ್ನು ತಳವಾರರ ಸುಬರ್ದುಕೊಟ್ಟು ಅಲ್ಲಿ ಸೇರಿದ್ದ ರೈತರ ಸಮಕ್ಷಮ ಅಪರಾಧವನ್ನ ಬಾಯಿಬಿಡಿಸಿ ಹಮಮಯ್ಯನನ್ನ ಅರೆಸ್ಟುಮಾಡಿ ಸ್ಟೇಷನ್‌ಗೆ ಕರೆದುಕೊಂಡು ಹೋದರಂತೆ. ಉಳಿದ ಅಪರಾಧಿಗಳು ಸಿಕ್ಕಲಿಲ್ಲ.

ತಾ. 20—4—58ನೇ ಭಾನುವಾರ ಪೋ. ಕಾನ್‌ಸ್ಟೇಬಲ್ ತಿಮ್ಮಯ್ಯ ಪಾಪಯ್ಯನ ಗ್ರಾಮಕ್ಕೆ ಹೋಗಿ, ಸಾಹೇಬರು ಕಳಿಸಿದ್ದಾರೆ, ಕಳವಿನ ಕೇಸು ರುಜುವಾತಾಗುವುದು ಕಷ್ಟ, ಪಂಚಾಯತಿ ಸೇರಿಸಿ ನಿ

(೬ನೇ ಪುಟ ನೋಡಿ)

ಸಭೆಯಲ್ಲಿ ಕಂದಾಯ ಬಾಕಿಯನ್ನು ಸರಕಾರವು ಪೂರ್ತ ಮನ್ನಾ ಮಾಡಬೇಕೆಂದೂ, ಕೆಲವು ರೈತರನ್ನು ಬಂಧಿಸಿ ಅವರ ಮೇಲೆ ಕೇಸುಗಳನ್ನು ಹಾಕಿರುವುದನ್ನು ಹಿಂತೆಗೆದುಕೊಳ್ಳಬೇಕೆಂದೂ ಮತ್ತು ಕಂದಾಯ ವಸೂಲಿ ಮಾಡುವಾಗ್ಗೆ ಪೋಲೀಸರು ಮತ್ತು ರೆವಿನ್ಯೂ ಅಧಿಕಾರಿಗಳು ನಡೆಸಿರುವ ದಬ್ಬಾಳಿಕೆಯ ಬಗ್ಗೆ ವಿಚಾರಣೆಯಾಗಬೇಕೆಂದೂ ಸರಕಾರವನ್ನು ಒತ್ತಾಯಪಡಿಸುವ ನಿರ್ಣಯಗಳು ಅನುಮೋದನೆಯಾಯಿತು.

ಬೆಂಗಳೂರು ಉತ್ತರ ತಾಲ್ಲೂಕು ರೈತ ಸಮ್ಮೇಳನ

ಬೆಂಗಳೂರು ಉತ್ತರ ತಾಲ್ಲೂಕು ರೈತ ಸಮ್ಮೇಳನವು ತಾರೀಖು 28-4-58 ರಂದು ಯಶವಂತಪುರದ ನಾರಾಯಣಸ್ವಾಮಪ್ಪನವರ ಛತ್ರದಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಪಿ. ವೆಂಕಟಗಿರಿಯಪ್ಪನವರು ವಹಿಸಿದ್ದರು. ಶ್ರೀ. ಎ್ಪ. ಎಲ್. ಉಪಾಧ್ಯಾಯ ಅವರು ಉದ್ಘಾಟನೆ ಮಾಡುತ್ತಾ "ರೈತರಲ್ಲಿ ಸಂಘಟನೆ ಇಲ್ಲದೆ ರೈತರ ಯಾವ ಮೂಲ ಸಮಸ್ಯೆಗಳನ್ನಾಗಲಿ ಬಗೆಹರಿಸಲು ಸಾಧ್ಯವಾಗದೆಂದೂ ರೈತರು ತಮ್ಮ ಶಕ್ತಿಯನ್ನು ಅರಿತುಕೊಂಡಲ್ಲಿ ಯಾವುದೇ ರೀತಿಯ ದಬ್ಬಾಳಿಕೆಯನ್ನೂ ಎದುರಿಸಬಹುದೆಂದೂ ತಿಳಿಸಿದರು. ಮುಂದುವರೆದು, ನಮ್ಮ ರೈತರು ಹಿಂದಿನ ಹಳೆಯ ಸಂಪ್ರದಾಯಗಳಿಗೆ ಬದ್ಧರಾಗಿ ತಮ್ಮ ನೈಜ ಶಕ್ತಿಯನ್ನು ಮರೆತಿರುವಾಗ ಸ್ವಾರ್ಥಿಗಳು ಇದನ್ನೇ ಉಪಜೀವನ್ನಾಗಿ ಮಾಡಿಕೊಂಡು ಶೋಷಣೆ ಮಾಡುತ್ತಿದ್ದಾರೆಂದು ತಿಳಿಸಿದರಲ್ಲದೆ ಈ ಸಮ್ಮೇಳನವು ರೈತರಲ್ಲಿ ಜಾಗೃತಿ ನವಶಕ್ತಿಯಾಗಲೆಂದು ಹಾರೈಸಿದರು. ಅಲ್ಲದೆ ಅವರು ಅಮೃತಸರದ ಅಧಿವೇಶನಕ್ಕೆ ಹೋಗಿದ್ದಾಗ ರೈತರು ಹೆಚ್ಚಾಗಿ ಸಭೆಗಳಲ್ಲಿ ಭಾಗವಹಿಸುತ್ತಿದ್ದರೆಂದೂ ಅವರಲ್ಲಿ ಬಹುಜನ ಸ್ತ್ರೀಯರೂ ಇದ್ದರೆಂದೂ ಇನ್ನು ಮುಂದೆ ಕರ್ನಾಟಕದ ನಾನಾ ಭಾಗಗಳಲ್ಲೂ ಅಂತಹ ಚಳುವಳಿಗಳು ಬೆಳೆಯುಲೆಂದು ಹಾರೈಸಿದರು.

ತಾಲ್ಲೂಕಿನ ನಾನಾ ಭಾಗಗಳಿಂದ ರೈತರು ಬಂದಿದ್ದರಲ್ಲದೆ ಬೆಂಗಳೂರು ಜಿಲ್ಲೆಯ ಇತರ ಭಾಗಗಳಾದ ದೊಡ್ಡಬಳ್ಳಾಪುರ, ಬೆಂಗಳೂರು ದಕ್ಷಿಣ, ಆನೇಕಲ್ಲು ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಪ್ರತಿನಿಧಿಗಳನ್ನುದ್ದೇಶಿಸಿ ದೊಡ್ಡಬಳ್ಳಾಪುರದ ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಶ್ರೀ ಹೆಚ್. ಮುಗುವಾಳಪ್ಪನವರು ಮಾತನಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಟಿ. ತಿರುಮಲಪ್ಪನವರು ಪ್ರತಿನಿಧಿಗಳನ್ನು, ಅಧ್ಯಕ್ಷರನ್ನು ಸ್ವಾಗತಿಸಿದರು.

ಸಾಯಂಕಾಲ 5 ಗಂಟೆಗೆ ರೈತರ ಮತ್ತು ಕಾರ್ಮಿಕರ ಮೆರವಣಿಗೆ ಮತ್ತು ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಬಹಿರಂಗ ಸಭೆಯನ್ನುದ್ದೇಶಿಸಿ ಅಧ್ಯಕ್ಷತೆ ವಹಿಸಿದ್ದ ಪಿ. ವೆಂಕಟಗಿರಿಯಪ್ಪ, ಬಿ. ಎಂ. ಆಂಜನಪ್ಪ, ಎಸ್. ಸೂರ್ಯನಾರಾಯಣರಾವ್, ಎಂ. ಎಸ್. ಕೃಷ್ಣನ್ ಮರಿದಾಸ್ ಮುಂತಾದವರು ಮಾತನಾಡಿದರು.

ಜತ್ತಿ ಸಮಿತಿ ನಿರ್ಣಯಗಳು ಮತ್ತು ಭೂಸುಧಾರಣೆ

ಬೆಂಗಳೂರು ಉತ್ತರ ತಾಲ್ಲೂಕು ರೈತ ಸಮ್ಮೇಳನವು 1958ನೇ ನವಂಬರ್ 16 ಮತ್ತು 17ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳನ್ನು ಸಂಪೂರ್ಣವಾಗಿ ಅನುಮೋದಿಸಿತು ಮತ್ತು ಸರಕಾರದ ನಿಧಾನ ನೀತಿಯನ್ನು ಖಂಡಿಸಿತು. ಕರ್ನಾಟಕ ಪ್ರಾಂತ ರೈತ ಸಮ್ಮೇಳನವು ಭೂಸುಧಾರಣೆಯ ಬಗ್ಗೆ ನಿಶ್ಚಿತ ಮತ್ತು ಪುರೋಗಾಮಿ ಧೋರಣೆ ತಾಳಬೇಕೆಂದು ಕೊಟ್ಟಿದ್ದ ಕರೆಯನ್ನು ಕೂಡ ಇನ್ನು ಸರಕಾರ ಸಮಗ್ರ ಶಾಸನ ತಯಾರು ಮಾಡದಿರುವುದಕ್ಕೆ ಸಮ್ಮೇಳನ ವಿಷಾದಿಸುತ್ತದೆ. ಕಾಂಗ್ರೆಸ್ಸಿನ ಗೌಹತಿ ಅಧಿವೇಶನವು ಬೇಗನೆ ಭೂಸುಧಾರಣೆ ಆಗಬೇಕೆಂಬ ಆದೇಶವನ್ನು ತಮ್ಮ ಸರ್ಕಾರಗಳಿಗೆ ನೀಡಿದ್ದಾಗಿ ಸಂತೋಷಿಸಿತು. ಹಿಡುವಳಿ ಪರಿಮಿತಿ ಮತ್ತು ಭೂವಿತರಣೆಯ ಬಗ್ಗೆ ಜಿಲ್ಲಾ ಮಟ್ಟದಲ್ಲಿ ರೈತರು ಕುರಿತು ಮಾತನಾಡಬೇಕೆಂದು ಸಮ್ಮೇಳನ ಅಭಿಪ್ರಾಯಪಟ್ಟಿತು.

ಜೋಡಿ ಗ್ರಾಮಗಳು : ಸರ್ಕಾರದ ಇನಾಂ ರದ್ದು ಶಾಸನದ ಪ್ರಕಾರ ವಶಪಡಿಸಿಕೊಂಡಿರುವ ಗ್ರಾಮಗಳಲ್ಲಿ ಇನಾಂ ರದ್ದು ಇಲಾಖೆಯು ಜೋಡಿದಾರರ ಪಕ್ಷಪಾತಿಯಾಗಿ ನೂರಾರು ವರ್ಷಗಳಿಂದ ಜಮೀನಿನಲ್ಲಿ ಬೇಸಾಯ ಮಾಡುತ್ತಿರುವ ರೈತರಿಗೆ ಜಮೀನು ದೊರೆಯದಂತೆ ಮಾಡುತ್ತಿರುವುದನ್ನು ಸಭೆ ಖಂಡಿಸುತ್ತದೆ. ಇನಾಂ ರದ್ದು ಶಾಸನ ಜಾರಿಗೆ ತರಲು ಪ್ರತಿ ತಾಲ್ಲೂಕಿನಲ್ಲೂ ರೈತಸಂಘದ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಅವರ ಅಭಿಪ್ರಾಯ ಪಡೆದು ರೈತರ ಹಕ್ಕುಬಾಧ್ಯತೆ ರಕ್ಷಿಸಬೇಕೆಂದು ಕೇಳಿಕೊಳ್ಳುತ್ತದೆ. ತಾಲ್ಲೂಕಿನ ಜೋಡಿ ಗ್ರಾಮಗಳಾದ ನೆಲಗದರನಹಳ್ಳಿ, ವಡೆಯರಹಳ್ಳಿ, ಸಿಂಗಾಪುರ, ಸುರಧೇನುಪುರ, ಬಾಲಗನಂಟೆ ಮುಂತಾದ ಗ್ರಾಮಗಳ ರೈತರ ಮೇಲಿರುವ ಕೇಸುಗಳನ್ನು ವಾಪಸು ತೆಗೆದುಕೊಂಡು ಸರ್ಕಾರ ರೆವಿನ್ಯೂ ಇಲಾಖೆಯ ಮಟ್ಟದಲ್ಲಿ ತೀರ್ಮಾನ ಮಾಡಬೇಕೆಂಬುದಾಗಿ ಕೇಳಿಕೊಳ್ಳಲಾಯಿತು. ಸರ್ವೆ ಸೆಟ್ಲ್‌ಮೆಂಟ್ ಆಗದೆ ಇರುವ ಗ್ರಾಮಗಳನ್ನು ಸರಕಾರ ವಶಪಡಿಸಿಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು.

ಸರಕಾರಿ ಬಂಜರು ಜಮೀನು : ಭೂದಾನ ರೈತರು ಅನೇಕ ಕಡೆ ದರಖಾಸ್ತು ಕೊಡಲಾಗಿದ್ದರೂ ಅಧಿಕಾರಿಗಳು ನಿಗಾ ಕೊಡದೆ ಇರುವುದನ್ನು ಸಮ್ಮೇಳನ ವಿಷಾಧಿಸಿತು. ಬಂಜರು ಜಮೀನು ವಿತರಣೆ ಮಾಡುವಾಗ ಆಯಾ ಗ್ರಾಮದ ಭೂಹೀನರಿಗೆ ಮೊದಲು ದರಖಾಸ್ತು ಮಂಜೂರು ಮಾಡಬೇಕು. ನಂತರ ಪಕ್ಕದ ಗ್ರಾಮಗಳವರಿಗೆ ಕೊಡಬಹುದು. ಸ್ವಂತ ಬೇಸಾಯಗಾರರಲ್ಲದ ಅಥವಾ 5 ಎಕ್ರೆಗಿಂತ ಜಾಸ್ತಿ ಇರುವವರಿಗೆ ಯಾವುದೇ ಕಾರಣದಿಂದಲೂ ಸದ್ಯದಲ್ಲಿ ಬಂಜರು ಜಮೀನು ಕೊಡಕೂಡದು.

ಹಣ್ಣು ತರಕಾರಿನ ಮೇಲಿನ ಸುಂಕಗಳು : ಬೆಂಗಳೂರು ಕಾರ್ಪೊರೇಷನ್ ಮತ್ತು ಸರಕಾರಗಳು ಪ್ರತ್ಯಕ್ಷ ತೆರಿಗೆಗಳನ್ನು ಹಾಕಿ ರೈತರಿಂದ ಹೆಚ್ಚಿನ ಸುಂಕವನ್ನು ವಸೂಲಿ ಮಾಡುವುದನ್ನು ತೀವ್ರವಾಗಿ ಖಂಡಿಸಲಾಯಿತು. ಈ ಬಗ್ಗೆ ಶೀಘ್ರದಲ್ಲೇ ತಾಲ್ಲೂಕಾದ್ಯಂತ ಜಾಗೃತ ಚಳುವಳಿಯನ್ನುಂಟು ಮಾಡಲು ಸಮ್ಮೇಳನ ಕರೆ ಕೊಟ್ಟಿತು.

ತಾಲ್ಲೂಕಿನ ಪುರೋಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆ : 1957-58 ನೇ ಸಾಲಿನಿಂದ ಎ್ಪ. ಇ. ಎಸ್. ಯೋಜನೆಯನ್ನು ಮಂಜೂರು ಮಾಡಿರುವುದನ್ನು ಸ್ವಾಗತಿಸಿ ರೈತರು ಅದರ ಸಂಪೂರ್ಣ ಪ್ರಯೋಜನ ಹೊಂದಬೇಕು. ಬೆಳೆ ನಷ್ಟವಾಗಿರುವ ಕಡೆ ಕಂದಾಯ ಮಾಫಿ ಮತ್ತು ಕೆರೆಗಳ ಮಣ್ಣು ತೆಗೆಸುವ ಕೆಲಸ ರಸ್ತೆ ರಿಪೇರಿಗಳು ಶಾಲೆಯಿಲ್ಲದ ಹಳ್ಳಿಗಳಿಗೆ ಸರ್ಕಾರಿ ಶಾಖೆಗಳನ್ನು ಮತ್ತು ತಾಲ್ಲೂಕಿನ ಹೆಚ್ಚು ಅನುಕೂಲವಾಗುವಂತೆ ಒಂದು ಹೆರಿಗೆ ಆಸ್ಪತ್ರೆ ಮತ್ತು ಪಶುವೈದ್ಯ ಆಸ್ಪತ್ರೆ ಕೊಡಬೇಕೆಂದು ಸರಕಾರವನ್ನು ಕೇಳಲಾಯಿತು.

ಕೇರಳ ಸರಕಾರಕ್ಕೆ ಅಭಿನಂದನೆ

ಸಮ್ಮೇಳನವು 1 ವರ್ಷ ಯಶಸ್ವಿ ಆಡಳಿತ ನಡೆಸಿ ದಿಟ್ಟತನದಿಂದ ಪುರೋಗಾಮಿ ಭೂಸುಧಾರಣೆ ತಂದು ಜನಾಭಿಪ್ರಾಯಕ್ಕಾಗಿ ಕಳುಹಿಸುತ್ತಿರುವುದನ್ನು ಸಮ್ಮೇಳನ ಹೃತ್ಪೂರ್ವಕವಾಗಿ ಅಭಿನಂದಿಸಿತು. ಜನತಾ ವಿರೋಧಿ ಶಕ್ತಿಗಳ ಅಡಚಣೆಯನ್ನು ಖಂಡಿಸಿತಲ್ಲದೆ ಆ ಸರಕಾರಕ್ಕೆ ಸಂಪೂರ್ಣ ಯಶಸ್ಸನ್ನು ಕೋರಿತು.

ಸಂದೇಶಗಳು

ಸಮ್ಮೇಳನಕ್ಕೆ ಶುಭಾಶಯವನ್ನು ಕೋರಿ ಕೇರಳದ ಮುಖ್ಯಮಂತ್ರಿಗಳಾದ ಇ. ಎಂ. ಎಸ್. ನಂಬೂದ್ರಿಪಾದ್ ಮತ್ತು ರೆವಿನ್ಯೂ ಸಚಿವೆ ಕೆ. ಆರ್. ಗೌರಿ ಇವರು ಕಳುಹಿಸಿದ್ದರು. ಕೆ.ಪಿ.ಟಿ.ಯು.ಸಿ. ಯ ಪರವಾಗಿ ಸೂರ್ಯನಾರಾಯಣ ರಾವ್ ಶುಭ ಕೋರಿದರು.

ಕಾರ್ಯಕಾರೀ ಸಮಿತಿ

ಅಧ್ಯಕ್ಷರು ಬಿ. ವಿ. ಹೆಚ್. ಗೌಡ, ಉಪಾಧ್ಯಕ್ಷರು ಬಿ. ಎಂ. ಆಂಜನಪ್ಪ ಮತ್ತು ತಿರುಮಳಪ್ಪ, ಕಾರ್ಯದರ್ಶಿ ಸಿ. ರಾಮಭದ್ರಯ್ಯ, ಉಪಕಾರ್ಯದರ್ಶಿ ಬಿ. ಎ್ಪ. ನಾರಾಯಣಸ್ವಾಮಿ, ಖಜಾಂಚಿ ಬಿ. ಟಿ. ವಿ. ರಾಜು.

ಸದಸ್ಯರು

ಸಿ. ಮುನಿಶಾಮಪ್ಪ, ಶಿವರುದ್ರಪ್ಪ, ಆನಂದ್, ಮರಿದಾಸ್, ಮರಿಯಪ್ಪ, ಮುನಿಬಚ್ಚಪ್ಪ, ಹೆಚ್. ಎನ್. ಕೆಂಪೇಗೌಡ, ನರಸಿಂಹಮೂರ್ತಿ, ಆರ್. ತಿಮ್ಮಯ್ಯ, ಬಿ. ಎಂ. ನಂಜೇಗೌಡ, ವೀರಣ್ಣ ಕೆಂಪೇಗೌಡ.

ಕಾರವಾರ ಮುನಿಸಿಪಲ್ ಚುನಾವಣೆಯಲ್ಲಿ
ಕಮ್ಯೂನಿಸ್ಟ್ ಉಮೇದುವಾರರ ವಿಜಯ

ಕಳೆದ ತಾ. 7-4-58ರಂದು ನಡೆದ ಕಾರವಾರದ ಮುನಿಸಿಪಲ್ ಚುನಾವಣೆಯಲ್ಲಿ ಕೋಡಿಬಾಗ್ ಚುನಾವಣಾ ಕ್ಷೇತ್ರದಿಂದ ಕಮ್ಯೂನಿಸ್ಟ್ ಉಮೇದುವಾರರು ಆರಿಸಿ ಬಂದಿರುವರು.

ಈ ಕ್ಷೇತ್ರದಲ್ಲಿ ನಾಲ್ಕು ಸ್ಥಾನಗಳಿಗೆ ಹತ್ತು ಸ್ಪರ್ಧಿಗಳಿದ್ದರು. ಈ ಪೈಕಿ ಅತೀ ಹೆಚ್ಚು ಮತಗಳಿಸಿ, ಕಮ್ಯೂನಿಸ್ಟ್ ಸ್ಪರ್ಧಿ ಶ್ರೀರಾಮ ಗಣೇಶ ಕಲ್ಗುಟ್‌ಕರ್‌ರವರು ಚುನಾಯಿಸಿ ಬಂದಿದಾರ್ದೆ.

ಮೇ ದಿನದ ಘೋಷಣೆಗಳಲ್ಲಿ ಲೆನಿನ್‌ವಾದೀ ಶಾಂತಿ ನೀತಿ

(೧ನೇ ಪುಟದಿಂದ)

ಸುಸ್ಥಿರ ಶಾಂತಿಯ ಭರವಸೆಯು ಚಿರಾಯುವಾಗಲಿ !

ಸೈನಿಕ-ವಾದದ ವಿರೋಧವಾಗಿಯೂ, 'ಬುಂಗೆಸ್ವೆಹ್ರ'ಗೆ ಪರಮಾಣು ಅಸ್ತ್ರಗಳನ್ನು ಸಜ್ಜುಗೊಳಿಸುವುದರ ವಿರೋಧವಾಗಿಯೂ ಹೋರಾಡುತ್ತಿರುವ ಜರ್ಮನ್ ಸಂಯುಕ್ತ ಪ್ರಜಾತಂತ್ರದ ಕಾರ್ಮಿಕ ಜನತೆಗೂ ಮತ್ತು ಪ್ರಗತಿಶೀಲ, ಶಾಂತಿಪ್ರಿಯ ಶಕ್ತಿಗಳಿಗೂ ಸೋದರ ಶುಭಾಶಯಗಳು ! ಸೋವಿಯೆತ್ ಮತ್ತು ಜರ್ಮನ್ ಜನತೆಗಳ ನಡುವಣ ಮೈತ್ರಿಯು ಯುರೋಪಿನ ಶಾಂತಿಯ ಹಿತಾರ್ಥವಾಗಿ ಇನ್ನೂ ಹೆಚ್ಚು ಶಕ್ತಿಯುತವಾಗಿ ಬೆಳೆಯಲಿ !

ಸೋವಿಯೆತ್ ಒಕ್ಕೂಟದ ಮತ್ತು ಇಟಲಿಯ ಜನತೆಗಳ ನಡುವಣ ಸ್ನೇಹ ಸಂಬಂಧಗಳು ವಿಕಾಸಗೊಳ್ಳಲಿ ಮತ್ತು ಹೆಚ್ಚು ಬಲಿಷ್ಠವಾಗಿ ಬೆಳೆಯಲಿ !

ಜನತೆಗಳ ಸಮಾನತೆ, ಪರಸ್ಪರ ಭರವಸೆ ಮತ್ತು ಗೌರವಗಳ ಮೇಲೆ ಆಧಾರಿಸಲ್ಪಟ್ಟ, ಸೋವಿಯೆತ್ ಒಕ್ಕೂಟದ ಮತ್ತು ಫಿನ್ಲೆಂಡಿನ ನಡುವಣ ಸ್ನೇಹ-ಸಹಕಾರಗಳು ಚಿರಾಯುವಾಗಲಿ !

ಸೋವಿಯೆತ್ ಜನತೆಯ-ಮತ್ತು ಸ್ವೀಡನ್, ನಾರ್ವೆ, ಡೆನ್ಮಾರ್ಕ್ ಮತ್ತು ಐಸ್ಲೆಂಡ್ ದೇಶಗಳ ಜನತೆಗಳ ನಡುವಣ ಸ್ನೇಹ ಸಂಬಂಧಗಳು ವಿಕಾಸಗೊಳ್ಳಲಿ ಮತ್ತು ಹೆಚ್ಚು ಬಲಪಟ್ಟು ಬೆಳೆಯಲಿ !

ಸೋವಿಯತ್ ಒಕ್ಕೂಟದ ಮತ್ತು ಆಸ್ಟ್ರಿಯದ ಜನತೆಗಳ ನಡುವಣ ಸ್ನೇಹ-ಸಹಕಾರ ಚಿರಾಯುವಾಗಲಿ !

ಸೈನಿಕ ವಾದದ ವಿರೋಧವಾಗಿಯೂ, ಮತ್ತು ತಮ್ಮ ದೇಶದ ಶಾಂತಿಯುತ, ಜನಾಧಿಪತ್ಯವಾದೀ ಸ್ವತಂತ್ರ ವಿಕಾಸದ ಸಲುವಾಗಿಯೂ ಹೋರಾಡುತ್ತಿರುವ ಜಪಾನೀ ಜನತೆಗೆ ಹೃತ್ಪೂರ್ವಕ ಶುಭಾಶಯಗಳು !

ಸಾಮ್ರಾಜ್ಯವಾದಿಗಳ ನವ ವಸಾಹತುವಾದೀ ಯೋಜನೆಗಳ ವಿರೋಧವಾಗಿಯೂ, ಮತ್ತು ತಮ್ಮ ರಾಜ್ಯಗಳ ರಾಷ್ಟ್ರೀಯ ಸ್ವಾತಂತ್ರ್ಯದ ಸರ್ವ ಸ್ವತಂತ್ರವೆಂದು ಕ್ರೋಢೀಕರಣದ ಸಲುವಾಗಿಯೂ ಹೋರಾಡುತ್ತಿರುವ ಅರಬ್ ಪ್ರಾಚ್ಯದ ಜನತೆಗಳಿಗೆ ಹೃತ್ಪೂರ್ವಕ ಶುಭಾಶಯಗಳು !

ಸಾಮ್ರಾಜ್ಯವಾದೀ ದಬ್ಬಾಳಿಕೆಯ ವಿರೋಧವಾಗಿಯೂ, ತಮ್ಮ ಸ್ವೇಚ್ಛೆಯ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ಸಲುವಾಗಿಯೂ ಹೋರಾಡುತ್ತಿರುವ, ವಸಾಹತು ಮತ್ತು ಪರತಂತ್ರ ದೇಶಗಳ ಜನತೆಗಳಿಗೆ ಹೃತ್ಪೂರ್ವಕ ಶುಭಾಶಯಗಳು.

—'ತಾಸ್'

ಕರ್ನಾಟಕಕ್ಕೊಂದು ಅಂಚೆವಲಯಕ್ಕಾಗಿ ಆಂದೋಳನ ನಡೆಯಬೇಕು

ವೆಂಕಟರಾಜ ಪಾನಸೆ

ಕರ್ನಾಟಕಕ್ಕೊಂದು ಅಂಚೆ ವಲಯ ಬೇಕೆಂದು ಇತ್ತೀಚಿಗೆ—ಅಂದರೆ ವಿಶಾಲ ಮೈಸೂರು ರೂಪುಗೊಂಡ ಬಳಿಕ–ಕನ್ನಡಿಗರು ಕನಸಿನಲ್ಲಿ ಮಾತನಾಡಿದಂತೆ ಕೊಂಚ ಜಾಸ್ತಿಯಾಗಿಯೆ ಮಾತನಾಡುವುದು ಕೇಳಿಬರುತ್ತಿದೆ. ನಮ್ಮ ದುರ್ದೈವವೆಂದರೆ ಅಂಚೆ ಶಾಖೆಯಲ್ಲಿದ್ದವರು ಇದರ ಅಗತ್ಯವನ್ನು ಹೆಚ್ಚಿಗೆ ತಿಳಿದು ಎಲ್ಲೋ ಒಮ್ಮೆ ಮಾತನಾಡಿದ್ದಾರೆಯೆ ವಿನಃ ಕನ್ನಡ ಸರಕಾರವಾಗಲಿ, ಜನಪ್ರತಿನಿಧಿಗಳಾಗಲಿ ಯಾರೂ ಆಸಕ್ತಿ ವಹಿಸಿಲ್ಲ.

ಅಂತೆಯೇ ನಮಗೊಂದು ಪ್ರತ್ಯೇಕ ವಲಯಕ್ಕಾಗಿ ಭಾರೀ ಆಂದೋಳನವೇ ನಡೆಯಬೇಕೆಂದು ನಾನೀಗ ಹೇಳಹೊರಟಿರುವುದು. ಇದು ಕೇವಲ ಭಾವೋದ್ರಿಕ್ತವಾದ ದುಡುಕಿನ ಮಾತಲ್ಲ, ಹಲವು ವಾಸ್ತವಾಂಶಗಳನ್ನು ತಿಳಿದು ಹೇಳುತ್ತಿರುವುದು. ಕರ್ನಾಟಕ ಪ್ರಾಂತ್ಯ ರಚನೆಯಾಗುವ ಮೊದಲೇ ಬೆಂಗಳೂರು ಹೊಸ ಪ್ರಾಂತ್ಯದ ರಾಜಧಾನಿ ಎಂಬುದು ಸರ್ವಸಮ್ಮತ ವಿಷಯವಾಗಿತ್ತು. ಇಂದಂತೂ ರಾಜಧಾನಿಯೇ ಆಗಿದೆ. ಈ ರಾಜಧಾನಿಗೂ ಬೇರೆ ಪ್ರಾಂತ್ಯಗಳ ರಾಜಧಾನಿಗೂ ಹೇಗೆ ವ್ಯತ್ಯಾಸ ಇದೆ ಎಂಬುದನ್ನು ನೋಡಿ:

೧೯೫೧ರಲ್ಲಿ ಬೆಂಗಳೂರಿನ ಜನಸಂಖ್ಯೆ ಸುಮಾರು ನಾಲ್ಕೂವರೆ ಲಕ್ಷದಷ್ಟಿತ್ತು. ಆಗ ಇಡೀ ನಗರಕ್ಕೆ ೭ ಅಂಚೆ ಹಂಚಿಕೆ ಕಛೇರಿಗಳು ಇದ್ದುವು. ೧೯೫೬ರಲ್ಲಿ ಜನಸಂಖ್ಯೆ ೮ ಲಕ್ಷ, ಅಂಚೆ ಹಂಚಿಕೆ ಕಛೇರಿಗಳು ಆಗಲೂ ಏಳೇ. ೧೯೫೭ರಲ್ಲಿ ಜನಸಂಖ್ಯೆ ೧೧ ಲಕ್ಷವನ್ನು ಮೀರುತ್ತಿತ್ತು. ಆಗ ಕೇವಲ ೨ ಕಛೇರಿಗಳು ಕೊಡಲ್ಪಟ್ಟು ಒಟ್ಟು ಒಂಭತ್ತು ಕಛೇರಿಗಳಾದುವು.

ಬೇರೆ ನಗರಗಳನ್ನೂ ಇದರೊಂದಿಗೆ ಈಗ ತುಲನೆ ಮಾಡಿ. ಅನ್ಯಾಯ ಗೋಚರಿಸುತ್ತದೆ:

ತ್ರಿವೇಂದ್ರಮ್–ಜನಸಂಖ್ಯೆ ೨॥ ಲಕ್ಷ, ಅಂಚೆ ಹಂಚಿಕೆ ಕಛೇರಿ ೮.

ಅಹ್ಮದಾಬಾದ್–ಜನಸಂಖ್ಯೆ ೮ ಲಕ್ಷ, ಅಂ. ಹಂ. ಕಛೇರಿ ೧೪.

ಮದ್ರಾಸ್—ಜನಸಂಖ್ಯೆ ೧೮ ಲಕ್ಷ, ಅಂ. ಹಂ. ಕಛೇರಿ ೩೧.

ಮೈಸೂರು — ಜನಸಂಖ್ಯೆ ೪ ಲಕ್ಷ, ಅಂ. ಹಂ. ಕಛೇರಿ ೨.

ಬೊಂಬಾಯಿ, ಮದರಾಸ್ ಮತ್ತು ಆಂಧ್ರದ (ಇಲ್ಲಿ ಎರಡು ವಲಯಗಳು ಇವೆ) ಅಂಚೆ ವಲಯಗಳು ತಮ್ಮ ಹಿತಚಿಂತನೆಯನ್ನೇ ಹೆಚ್ಚಾಗಿ ನೋಡಿಕೊಂಡಿವೆಯೇ ವಿನಃ ತಮ್ಮ ವಲಯದಲ್ಲಿ ಸೇರಿರುವ ಇನ್ನಿತರ ಪ್ರದೇಶಗಳ ಕಡೆಗೆ ಗಮನ ಕೊಟ್ಟಿಲ್ಲವೆಂದು ವ್ಯಕ್ತವಾಗುತ್ತದೆ.

ಇಲ್ಲಿ ಇನ್ನೊಂದು ತಂತಿಯ ತಮಾಷೆಯನ್ನು ನೋಡಿ:

ದಕ್ಷಿಣ ಕನ್ನಡದ ಉಡುಪಿಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ (ಇವೆರಡೂ ಅಷ್ಟೇನು ದೂರದ ಊರುಗಳಲ್ಲ) ತಂತಿ ಕಳುಹಿಸಿದರೆ ಅದು ಹೋಗುವ ದಾರಿ ಹೀಗೆ: ತೀರ್ಥಹಳ್ಳಿ, ಶಿವಮೊಗ್ಗ, ಬೆಂಗಳೂರು, ಕೊಯಮುತ್ತೂರು, ಕೋಝಿಕೋಡ್, ಮಂಗಳೂರು, ಉಡುಪಿ!

ಇದಕ್ಕೂ ತೀರಾ ಹತ್ತಿರದಲ್ಲಿರುವ ಪುತ್ತೂರಿನಿಂದ ಮಡಿಕೇರಿಗೆ ಹೋಗಬೇಕಾದ [ಇವೆರಡಕ್ಕೂ ಇರುವ ದೂರ ಕೇವಲ ೫೦ ಮೈಲಿ] ತಂತಿ ಹೀಗೆ ಹೋಗುತ್ತದೆ: ಮಂಗಳೂರು, ಕೋಝಿಕೋಡ್, ಕೊಯಮುತ್ತೂರು, ಮೈಸೂರು, ಆಮೇಲೆ ಮಡಿಕೇರಿ!

ನಮ್ಮದೇ ಆದ ಅಂದರೆ ಕರ್ನಾಟಕಕ್ಕೊಂದು ಪ್ರತ್ಯೇಕ ಅಂಚೆ ವಲಯವಾದರೆ ಮಾತ್ರ ಈ ತೊಂದರೆ ತಪ್ಪುವುದು ಇಲ್ಲದಿದ್ದರೆ ಈ ಊರುಗಳವರಿಗೆ ತಂತಿಗಿಂತ ಕಾಗದಗಳೇ ಮೊದಲು ತಲಪುವುದು ತಪ್ಪಿದ್ದಲ್ಲ!

೧ ಕೋಟಿ ೬೦ ಲಕ್ಷ ಜನ ವಸತಿಯಿರುವ ಪಂಜಾಬಿಗೆ, ೨ ಕೋಟಿ ೬೦ ಲಕ್ಷ ಜನ ವಸತಿಯ ಬಂಗಾಳಕ್ಕೆ, ಕೇವಲ ೯೦ ಲಕ್ಷ ಜನ ವಸತಿಯ ಅಸ್ಸಾಮಿಗೆ, ೧ ಕೋಟಿ ೪೬ ಲಕ್ಷ ಜನವಸತಿಯ ಒರಿಸ್ಸಾಕ್ಕೆ ಒಂದೊಂದು ಅಂಚೆ ವಲಯವಿದೆ. ಆದರೆ ೨ ಕೋಟಿಗೂ ಮಿಕ್ಕಿರುವ ಜನವಸತಿಯ ಕರ್ನಾಟಕವು ಮಾತ್ರ ಇನ್ನೊಂದು ಪ್ರಾಂತ್ಯದ ವರಿಷ್ಠತೆಯ ಅರಿಷ್ಟ ಬಡಿದುಕೊಂಡು ಬಾಳಬೇಕಾಗಿದೆ.

ಇನ್ನೊಂದು ನಿದರ್ಶನವನ್ನು ತೆಗೆದುಕೊಳ್ಳಿ:

೨ ಸಾವಿರ ಜನರಿಗೊಂದರಂತೆ ಅಂಚೆ ಕಛೇರಿ ಇರಬೇಕೆಂಬುದು ಇಂದಿನ ಸಾಮಾನ್ಯ ನಿಯಮ. ಈ ನಿಯಮ [ಪ್ರಮಾಣ] ಬೇರೆ ಪ್ರಾಂತ್ಯಗಳಿಗೂ ನಮಗೂ ಹೇಗೆ ಅನ್ವಯವಾಗಿದೆ ಎಂಬುದನ್ನು ನೋಡೋಣ:

ಪಂಜಾಬಿನಲ್ಲಿ ೩ ಸಾವಿರ ಜನರಿಗೊಂದು [ಇಲ್ಲಿ ಸಾವಿರದ ಮೇಲಿನ ಅಂಕಿಗಳನ್ನು ಬಿಟ್ಟುಬಿಡುತ್ತೇನೆ]. ಮದರಾಸಿನಲ್ಲೂ, ರಾಜಸ್ಥಾನದಲ್ಲೂ ೫ ಸಾವಿರ ಜನರಿಗೊಂದರಂತೆ ಇದ್ದರೆ ನಮ್ಮಲ್ಲಿ ಬೆಳಗಾಂ ಜಿಲ್ಲೆಯಲ್ಲಿ ೫ ಸಾವಿರ ಜನರಿಗೊಂದು, ಧಾರವಾಡ ಜಿಲ್ಲೆಯಲ್ಲಿ ೮ ಸಾವಿರ ಜನರಿಗೊಂದು, ತುಮಕೂರು ಜಿಲ್ಲೆಯಲ್ಲಿ ೯ ಸಾವಿರ ಜನರಿಗೊಂದು, ಬೆಂಗಳೂರು ಜಿಲ್ಲೆಯಲ್ಲಿ ೧೨ ಸಾವಿರ ಜನರಿಗೊಂದರಂತೆ ಅಂಚೆ ಕಛೇರಿಗಳು ಇವೆ.

ಈ ಪಟ್ಟಿ ಸಾಕೆಂದು ಕಾಣುತ್ತದೆ. ಡಿವಿಜನ್ನುಗಳ ಹಂಚಿಕೆಯಲ್ಲಿಯೂ ಹೀಗೆ ಅನ್ಯಾಯವಿದೆ. ಅದನ್ನಿಲ್ಲಿ ಉಲ್ಲೇಖಿಸ ಹೋಗುವುದಿಲ್ಲ.

ಇಷ್ಟನ್ನೂ ನಾವು ಸಹಿಸಿಕೊಂಡು ಕೂಡ್ರಬೇಕೆ? ಎಷ್ಟು ದಿನ ಕೂಡ್ರಬೇಕು? ಬೇರೆ ಪ್ರಾಂತ್ಯಗಳವರಂತೆ ಕನ್ನಡಿಗರಿಗೂ ಹೆಚ್ಚಿನ ಅಂಚೆ ಸೌಕರ್ಯವೂ ಅದರಿಂದ ಅವರ ಹಾಗೂ ತನ್ಮೂಲಕ ದೇಶದ ಅಭಿವೃದ್ಧಿಗೂ ಸಹಾಯಕವಾಗದೆ?

ಪ್ರತ್ಯೇಕ ಅಂಚೆ ವಲಯವಿಲ್ಲದುದರಿಂದ ಇನ್ನೂ ಅದೆಷ್ಟೋ ತೊಂದರೆಗಳಿವೆ. ಈ ವಿಷಯದಲ್ಲಿ ಪತ್ರಿಕೆಗಳು ಪ್ರಧಾನ ಪಾತ್ರ ವಹಿಸಬೇಕಾಗಿದೆ. ನಮ್ಮ ಕೂಗು ದಿಲ್ಲಿಯವರೆಗೆ ಕೇಳುವಂತೆ ಮಾಡಬೇಕಾಗಿದೆ. ಅದಕ್ಕಾಗಿ ದೊಡ್ಡದೊಂದು ಆಂದೋಳನವೇ ನಡೆಯಬೇಕು. ಪ್ರತ್ಯಕ್ಷ ಕಾರ್ಯಕ್ಕಿಳಿಯಬೇಕು. ನಮಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಬೇಕು. ಕನ್ನಡಿಗರ ಹಾಗೂ ಕರ್ನಾಟಕದ ಹಿತಚಿಂತನೆಗಾಗಿ ಭಾರೀ ಆಂದೋಳನವೇ ನಡೆಯಬೇಕು.

——

ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿಯ—

ಮೇ ದಿನದ ಘೋಷಣೆಗಳಲ್ಲಿ ಲೆನಿನ್‌ವಾದೀ ಶಾಂತಿ ನೀತಿ

1958ರ ಮೇ ದಿನಾಂಕ 1ರ ಸಲುವಾಗಿ ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ಹೊರಡಿಸಿದ ಘೋಷಣೆಗಳು ಏಪ್ರಿಲ್ ದಿನಾಂಕ 14ರಂದು ಸೋವಿಯೆತ್ ಪತ್ರಿಕೆಗಳಲ್ಲಿ ಪ್ರಕಟವಾದುವು. ಈ ಘೋಷಣೆಗಳಲ್ಲಿ ಕೇಂದ್ರ ಸಮಿತಿಯು, ಶಾಂತಿ, ಜನಾಧಿಪತ್ಯ ಮತ್ತು ಸಮಾಜವಾದಗಳ ಸಲುವಾಗಿ ಹೋರಾಡುತ್ತಿರುವ ಎಲ್ಲಾ ಜನತೆಗಳಿಗೆ ಸೋದರ ಶುಭಾಶಯಗಳನ್ನು ನೀಡುತ್ತದೆ. ಪರಮಾಣು, ಜಲಜನಕ ಅಸ್ತ್ರಗಳ ಬಹಿಷ್ಕಾರದ ಸಲುವಾಗಿಯೂ, ಶಸ್ತ್ರಾಸ್ತ್ರಗಳ ತಗ್ಗುವರಿಗಾಗಿಯೂ, ಹೊಸ ಯುದ್ಧದ ಪ್ರಮಾದದ ವಿರೋಧವಾಗಿ ಶಾಂತಿ ಮತ್ತು ಅಂತರ ರಾಷ್ಟ್ರೀಯ ಸಹಕಾರದ ಸಲುವಾಗಿಯೂ ಹೋರಾಡಲು, ಎಲ್ಲ ದೇಶಗಳಲ್ಲಿನ ಕಾರ್ಮಿಕ ಜನತೆಗೂ ಮತ್ತು ಪ್ರಗತಿಶೀಲ ಶಕ್ತಿಗಳಿಗೂ ಕೇಂದ್ರ ಸಮಿತಿಯು ಕರೆಯನ್ನು ಕೊಡುತ್ತದೆ. ಕಮ್ಯೂನಿಸ್ಟ್ ಪಾರ್ಟಿಯೂ ಮತ್ತು ಸೋವಿಯತ್ ಸರಕಾರವೂ ಅನುಸರಿಸುತ್ತಿರುವ ಲೆನಿನ್‌ವಾದೀ ಶಾಂತಿ ನೀತಿಯನ್ನು ವ್ಯಕ್ತಪಡಿಸುವ ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಘೋಷಣೆಗಳು ಈ ಕೆಳಗಿನಂತಿವೆ:

ಸೋವಿಯತ್ ಒಕ್ಕೂಟದ ಲೆನಿನ್‌ವಾದೀ ವಿದೇಶಾಂಗ ನೀತಿಯು, ವಿಭಿನ್ನ ಸಾಮಾಜಿಕ ವ್ಯವಸ್ಥೆಗಳುಳ್ಳ ರಾಜ್ಯಗಳ ಶಾಂತಿಯುತ ಸಹ–ಅಸ್ತಿತ್ವದ ನೀತಿಯು, ಶಾಂತಿಯನ್ನು ಉಳಿಸುವ ಮತ್ತು ಕ್ರೋಢೀಕರಿಸುವ ನೀತಿಯು, ಎಲ್ಲ ದೇಶಗಳೊಡನೆಯೂ ಆರ್ಥಿಕ, ಸಾಂಸ್ಕೃತಿಕ ಸಂಪರ್ಕಗಳ ವಿಕಾಸದ ನೀತಿಯು ಚಿರಾಯುವಾಗಲಿ!

ಪ್ರಪಂಚದ ಜನತೆಗಳೇ! ಎಲ್ಲ ಬಗೆಯ ಪರಮಾಣು, ಜಲಜನಕ ಅಸ್ತ್ರಗಳ ಪರೀಕ್ಷಾ ಪ್ರಯೋಗಗಳನ್ನು ಸೋವಿಯೆತ್ ಒಕ್ಕೂಟವು ನಿಲ್ಲಿಸಿದೆ. ಅಮೆರಿಕದ ಸಂಯುಕ್ತ ರಾಜ್ಯಗಳು ಮತ್ತು ಬೃಹತ್ ಬ್ರಿಟನ್ನಿನ ಸರಕಾರಗಳು ತಕ್ಷಣವೇ, ಪ್ರತಿಯೊಂದು ಕಡೆಯೂ ಮತ್ತು ಸದಾ ಕಾಲದ ವರೆಗೂ, ಪರಮಾಣು, ಜಲಜನಕ ಅಸ್ತ್ರಗಳ ಪರೀಕ್ಷಾಪ್ರಯೋಗಗಳನ್ನು ನಿಲ್ಲಿಸಬೇಕೆಂದು ಒತ್ತಾಯದ ಬೇಡಿಕೆಯನ್ನು ಮಂಡಿಸಿರಿ!

ಎಲ್ಲ ದೇಶಗಳ ಕಾರ್ಮಿಕ ವರ್ಗದ ಮತ್ತು ಕಾರ್ಮಿಕ ಜನತೆಯ ಕಾರ್ಯಾಚರಣೆಯ, ಸದಾ ಬೆಳೆಯುತ್ತಿರುವ, ಒಕ್ಕಟ್ಟು ಚಿರಾಯುವಾಗಲಿ! ರಾಷ್ಟ್ರಗಳ ಶಾಂತಿ, ಜನಾಧಿಪತ್ಯ ಮತ್ತು ಸ್ವಾತಂತ್ರ್ಯಗಳಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಕಮ್ಯೂನಿಸ್ಟರ, ಸಮಾಜವಾದಿಗಳ ಮತ್ತು ಎಲ್ಲ ಪ್ರಗತಿಶೀಲ ಶಕ್ತಿಗಳ ನಡುವಣ ಸಹಕಾರವು ಬಲಿಷ್ಠವಾಗಿ ಬೆಳೆಯಲಿ!

ಬಲಿಷ್ಠವಾದ ಸಮಾಜವಾದೀ ಶಿಬಿರವು, ಜನತೆಗಳ ಶಾಂತಿ–ಭದ್ರತೆಗಳ ವಿಶ್ವಾಸಾರ್ಹ ರಕ್ಷೆಯು ಚಿರಾಯುವಾಗಲಿ! ಸಮಾಜವಾದೀ ದೇಶಗಳ ಜನತೆಗಳ ಮಹಾ ಕೂಟವು ಸಮೃದ್ಧವಾಗಲಿ, ಬಲಿಷ್ಠವಾಗಿ ಬೆಳೆಯಲಿ!

ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ತನ್ನ ಘೋಷಣೆಗಳಲ್ಲಿ, ಸಮಾಜವಾದದ ನಿರ್ಮಾತರಾದ ಮಹಾ ಚೀಣೀ ಜನತೆಗೆ ಸೋದರ ಶುಭಾಶಯಗಳನ್ನು ನೀಡಿದೆ:

ಸೋವಿಯತ್ ಮತ್ತು ಚೀಣೀ ಜನತೆಗಳ, ಸಾರ್ವತ್ರಿಕ ಶಾಂತಿಯ ಈ ಬಲಿಷ್ಠ ರಕ್ಷೆಯ ಅಭೇದ್ಯ ಮೈತ್ರೀ–ಸಹಕಾರಗಳು ಚಿರಾಯುವಾಗಲಿ!

ಇತರ ಘೋಷಣೆಗಳಲ್ಲಿ, ಎಲ್ಲಾ ಇತರ ಸಮಾಜವಾದೀ ದೇಶಗಳ ಕಾರ್ಮಿಕ ಜನತೆಗೆ ಶುಭಾಶಯಗಳನ್ನು ಕಳಿಸಲಾಗಿದೆ.

ಇತರ ಘೋಷಣೆಗಳು ಈ ಕೆಳಗಿನಂತಿವೆ:

ತಮ್ಮ ದೇಶದ ಪ್ರಗತಿಯ ಸಲುವಾಗಿಯೂ, ಏಶಿಯದಲ್ಲಿಯೂ ಮತ್ತು ಪ್ರಪಂಚದಲ್ಲೆಲ್ಲೆಡೆಯೂ ಶಾಂತಿಯ ಸಲುವಾಗಿಯೂ ಹೋರಾಡುತ್ತಿರುವ ಮಹತ್ತರ ಭಾರತೀಯ ಜನತೆಗೆ ಸೋದರ ಶುಭಾಶಯಗಳು! ಸೋವಿಯೆತ್ ಒಕ್ಕೂಟದ ಮತ್ತು ಭಾರತ ದೇಶದ ಜನತೆಗಳ ನಡುವಣ ಸ್ನೇಹ ಸಹಕಾರಗಳು ಇನ್ನೂ ಹೆಚ್ಚು ಬಲಯುತವಾಗಿ ಬೆಳೆಯಲಿ!

ವಿದೇಶೀ ಸಾಮ್ರಾಜ್ಯವಾದಿಗಳ ಮತ್ತು ಅವರ ಹಿಂಬಾಲಕರ ವಿರೋಧವಾಗಿ ನಡೆಸುವ ಹೋರಾಟದಲ್ಲಿ ತಮ್ಮ ಸ್ವೇಚ್ಛಾ ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳುತ್ತಿರುವ ಇಂಡೋನೇಷಿಯದ ಜನತೆಗೆ ಸೋದರ ಶುಭಾಶಯಗಳು!

ಶಾಂತಿಯ ಸಲುವಾಗಿಯೂ ಮತ್ತು ತಮ್ಮ ದೇಶಗಳ ರಾಷ್ಟ್ರೀಯ ಸ್ವಾತಂತ್ರ್ಯದ ಕ್ರೋಢೀಕರಣದ ಸಲುವಾಗಿಯೂ ಹೋರಾಡುತ್ತಿರುವ ಬರ್ಮಾ ಸಿಂಹಳದ್ವೀಪ ಮತ್ತು ಕಂಬೋಡಿಯಾ ದೇಶಗಳ ಜನತೆಗಳಿಗೆ ಸೋದರ ಶುಭಾಶಯಗಳು!

ಬೃಹತ್ ಬ್ರಿಟನ್, ಅಮೆರಿಕದ ಸಂಯುಕ್ತ ರಾಜ್ಯಗಳು, ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟದ ಜನತೆಗಳ ಸ್ನೇಹ–ಸಹಕಾರಗಳು, ಪ್ರಪಂಚದಲ್ಲೆಲ್ಲೆಡೆಯ

(ಮುಂದೆ ಪುಟ ನೋಡಿ)

ಪುರೋಗಾಮಿ ಕಾರ್ಮಿಕ ನೀತಿಗಾಗಿ, ಕೂಲಿ, ಬೋನಸ್ ಹೆಚ್ಚಳಕ್ಕಾಗಿ,

(ಮೊದಲನೇ ಪುಟದಿಂದ)

ದ ಒಕ್ಕೊರಲಿನ ಮತ್ತು ಯೋಜನೆಗೆ ಸಹಕಾರ ಪಡೆಯಬೇಕಾದಲ್ಲಿ ಗಮನಿಸಬೇಕಾದ ಅತಿಮುಖ್ಯ ಕೇಳಿಕೆಗೆ ಮಾನ್ಯತೆ ಕೊಡದೆ ಇದೆ. ಕೆಲವು ದಿನಗಳ ಹಿಂದೆ ಜರುಗಿದ ತ್ರಿಪಕ್ಷ ಸಮ್ಮೇಳನದಲ್ಲಿ ಕೇಂದ್ರ ಕಾರ್ಮಿಕ ಮಂತ್ರಿ ಶ್ರೀ ಗುಜರಿಲಾಲ್‌ನಂದಾರವರು ಇದರ ಬಗ್ಗೆ ಮಾತನಾಡಿ ಕೂಲಿ ಹೆಚ್ಚಳದ ತತ್ವ ಒಪ್ಪಿದರೂ ಸಹ ಅದನ್ನು ಕಾರ್ಯಗತ ಮಾಡಲಾಗುವುದಿಲ್ಲವೆಂದಿದ್ದಾರೆ.

ಸರಕಾರದ ಕಾರ್ಮಿಕ ವಿರೋಧಿ ನೀತಿ

ಕೂಲಿ ನಿರ್ಣಯ ಸಮಿತಿಗಳನ್ನು ಎಲ್ಲ ಮುಖ್ಯ ಕೈಗಾರಿಕೆಗಳಿಗೂ ಅನ್ವಯಿಸುವಂತೆ ರಚಿಸಬೇಕೆಂಬ ಅತ್ಯಾವಶ್ಯಕ ಕೇಳಿಕೆಯನ್ನು ಸಹ ಸರ್ಕಾರ ಮಾನ್ಯ ಮಾಡಲು ತಯಾರಿಲ್ಲ.

ಅಂತೆಯೇ ಕೋರ್ಟುಗಳು ಹಾಗೂ ಸುಪ್ರೀಂ ಕೋರ್ಟು ಕೈಗಾರಿಕಾ ವಿವಾದಗಳಲ್ಲಿ ಹೆಚ್ಚಾಗಿ ತಲೆಯಿಟ್ಟು ಕಾರ್ಮಿಕರಿಗೆ ಅನ್ಯಾಯವಾಗು ತೀರ್ಪುಗಳನ್ನು ಕೊಡುತ್ತಿರುವುದರ ಬಗ್ಗೆ, ಕಾರ್ಮಿಕವರ್ಗ ತನ್ನ ತೀವ್ರ ಪ್ರತಿಭಟನೆ ಪ್ರದರ್ಶಿಸಿದ್ದರೂ ಸಹ, ಸರ್ಕಾರವು ಕಾನೂನನ್ನು ತಿದ್ದುಪಡಿ ಮಾಡಲಾಗಲೀ, ಘಟನಾವಳಿಯನ್ನು ಬದಲಾಯಿಸಲಾಗಲೀ ಮುಂಬಂದಿಲ್ಲ. ಇದರಿಂದಾಗಿ ಲಕ್ಷಾಂತರ ಕಾರ್ಮಿಕರಿಗೆ ಅನ್ಯಾಯವಾಗಿದೆ. ಪತ್ರಿಕೋದ್ಯೋಗಿಗಳಿಗೆ ಅನ್ವಯಿಸುವ ಶಾಸನದಲ್ಲಿಯೂ, ನ್ಯೂನತೆಗಳನ್ನು ಹುಡುಕಿ, ಪತ್ರಕರ್ತರ ವೇತನ ಸಮಿತಿಯ ತೀರ್ಪನ್ನು ತಳ್ಳಿಹಾಕಿ, ಪತ್ರಿಕಾ ಬಂಡವಾಳಗಾರರಿಗೆ ಅನುಕೂಲ ಮಾಡಿಕೊಟ್ಟಿದೆ. ಬಂಡವಾಳಗಾರರಿಗೆ ಕೊಡಬೇಕಾದ ಪರಿಹಾರದ ಪ್ರಶ್ನೆ ಬಂದಾಗ ಘಟನಾವಳಿಯನ್ನೇ ತಿದ್ದುಪಡಿ ಮಾಡಲು ಮುಂಬಂದ ಸರ್ಕಾರ ಕಾರ್ಮಿಕರಿಗೆ ಅನ್ಯಾಯವೆಸಗುತ್ತಿರುವುದರ ಬಗ್ಗೆ ತಿದ್ದುಪಡಿ ಮಾಡಲು ಹಿಂಜರಿಯುತ್ತಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಹುಭಾಗ ಹಣವನ್ನು ಸರ್ಕಾರಿ ಕ್ಷೇತ್ರದಲ್ಲೇ ವ್ಯಯ ಮಾಡಬೇಕೆಂದು ನಿರ್ಧರಿಸಿರುವುದರಿಂದ, ಸರ್ಕಾರ ನಡೆಸುತ್ತಿರುವ ಕೈಗಾರಿಕೆಗಳ ಪಾತ್ರ ಅತಿಮುಖ್ಯವಾಗುತ್ತದೆ. ಹಾಗೂ ಕೈಗಾರಿಕೆಗಳಲ್ಲಿರುವ ಕಾರ್ಮಿಕರ ಬಗ್ಗೆ ತಾಳುವ ನೀತಿಯು ಮಹತ್ವದ್ದು. ಹೀಗಿರುವಲ್ಲಿ, ವಾಸ್ತವಾಂಶವೇನು? ಕ್ರೇಂದ ಕೈಗಾರಿಕೆಗಳ ನೌಕರರ ಬಗ್ಗೆ ಸರಿಯಾದ ನೀತಿಇಲ್ಲದೆ, ಅವರನ್ನು ಕೇಂದ್ರ ಸರಕಾರದ ನೌಕರರಂತೆ ಪರಿಗಣಿಸದೆ, ಅವರಿಗೆ ಕೂಲಿ, ತುಟ್ಟಿ ಭತ್ಯ, ಇತ್ಯಾದಿ ವಿಷಯಗಳಲ್ಲಿ ಅಲ್ಲಗಳೆದು, ಅವರ ಕೇಳಿಕೆಗಳನ್ನು ಸಹ ಶೀಘ್ರವಾಗಿ ಇತ್ಯರ್ಥ ಮಾಡದೆ ಕಾಲವಿಳಂಬಮಾಡಿ,-ಖಾಸಗೀ ಬಂಡವಾಳಗಾರರಿಗಿಂತ ತೀರಾ ಅನ್ಯಾಯವಾಗಿ ವರ್ತಿಸುತ್ತಿದೆ. ಹಿಂದೂಸ್ತಾನ್ ವಿಮಾನ ಕಾರ್ಖಾನೆ, ಹಿಂದೂಸ್ತಾನ್ ಮೆಷಿನ್‌ಟೂಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಫೋನ್ ಕಾರ್ಖಾನೆಯಲ್ಲಿ ತೀರಾ ಪ್ರತಿಗಾಮಿ ನೀತಿಯನ್ನನುಸರಿಸಿ ಕಾರ್ಮಿಕರ ಸಹಾಯ ಸಹಕಾರಗಳನ್ನು ಕೈಗಾರಿಕೆಯ ಬಚಾವಣೆಗೂ, ಪಂಚವಾರ್ಷಿಕ ಯೋಜನೆಯ ಯಶಸ್ವಿಗೂ ಉಪಯೋಗಿಸದೆ, ಅದರ ಕ್ರೋಧಕ್ಕೆ ಪಾತ್ರವಾಗಿದೆ.

ಮೈಸೂರು ಸರಕಾರದ ನೀತಿ

ಮೈಸೂರು ಸರ್ಕಾರದ ಕಾರ್ಮಿಕ ನೀತಿಯ ಬಗ್ಗೆ ಪ್ರಶಂಸನೀಯವಾದದ್ದನ್ನು ಹೇಳಲೇನೂ ಇಲ್ಲ. ಪ್ರತಿಗಾಮಿ ನೀತಿಯಲ್ಲಿ ಅಗ್ರಸ್ಥಾನವಹಿಸಿದೆ ಮೈಸೂರು ಸರ್ಕಾರ. ಹೊಸ ಮೈಸೂರಿನಲ್ಲಿ ಕೈಗಾರಿಕಾ ವಿವಾದಗಳು ಅನೇಕವು ಉದ್ಭವಿಸುವುದರಿಂದ ಅವುಗಳನ್ನು ಇತ್ಯರ್ಥಮಾಡಲು ಎರಡನೆಯ ಕೈಗಾರಿಕಾ ಪಂಚಾಯತಿ ನ್ಯಾಯಾಲಯವನ್ನು ರಚಿಸಬೇಕೆಂದು ಎಲ್ಲ ಕಾರ್ಮಿಕ ಸಂಘಗಳು ಒತ್ತಾಯಿಸಿದ್ದರೂ ಸಹ, ಸರ್ಕಾರ ಸುಮ್ಮನಿದೆ. ಒಂದೇ ಕೈಗಾರಿಕಾ ನ್ಯಾಯಾಲಯವಿದ್ದು ಸುಮಾರು 90 ವಿವಾದಗಳನ್ನು ಮೈಸೂರಿನ ಮೂಲೆ ಮೂಲೆಗೆ ತೆರಳಿ ಹೇಗತಾನೆ ಶೀಘ್ರವಾಗಿ ಇತ್ಯರ್ಥಮಾಡಲು ಸಾಧ್ಯ?

ಪ್ರಗತಿಪರ ಕಾರ್ಮಿಕ ನೀತಿಯೆಂದರೆ, ಕಾರ್ಮಿಕ-ಮಾಲಿಕರ ನಡುವಣ ವಿವಾದಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥ ಮಾಡಲು ಯತ್ನಿಸುವುದು, ಕಾರ್ಮಿಕರ ಅನುಕೂಲಕ್ಕಾಗಿ ಪ್ರಗತಿಪರ ಶಾಸನಗಳನ್ನು ತರುವುದು, ಶಾಸನಗಳ ಅನ್ವಯಕ್ಕೂ, ಮಾಲಿಕ-ಕಾರ್ಮಿಕ ಸೌಹಾರ್ದ ಸಂಬಂಧವನ್ನು ಬೆಳೆಸುವುದಕ್ಕೂ ತ್ರಿಪಕ್ಷ ಸಲಹಾ ಸಮಿತಿಗಳನ್ನು ರಚಿಸುವುದು, ಮುಖ್ಯವಾದ ಕೈಗಾರಿಕೆಗಳಲ್ಲಿ ವೇತನ ಸಮಿತಿಗಳನ್ನು ರಚಿಸುವುದು ಇತ್ಯಾದಿಗಳು. ಈ ಅಳತೆಗೋಲಿನಲ್ಲಿ ಸರ್ಕಾರದ ಕಾರ್ಮಿಕ ನೀತಿಯನ್ನು ಪರೀಕ್ಷಿಸಿದಲ್ಲಿ, ಮೈಸೂರು ಸರ್ಕಾರವು ತೀರಾ ಹಿಂದುಳಿದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ತೀರಾ ಶೋಷಿಸಲ್ಪಟ್ಟ ಕಾರ್ಮಿಕರಾದ, ಬೀಡಿ ಊದುಬತ್ತಿ, ಹೋಟೆಲ್ ಇತ್ಯಾದಿ ಕಾರ್ಮಿಕರ ಬಗ್ಗೆ, ಗಮನ ಸಲ್ಲಿಸಿ ಅವರ ಜೀವನ ಮಟ್ಟವನ್ನೂ, ಸ್ಥಿತಿಗಳನ್ನೂ ಉತ್ತಮಪಡಿಸುವಂತಹ ಶಾಸನವನ್ನು ತರಲು ಸರ್ಕಾರ ಹಿಂಜರಿಯುತ್ತಿದೆ. ಮದ್ರಾಸ್ ಸರ್ಕಾರಕ್ಕಿಂತ ಈ ವಿಷಯದಲ್ಲಿ ಮೈಸೂರು ಸರಕಾರ ಹಿಂದುಳಿದಿದೆ. ಫ್ಯಾಕ್ಟರಿ ಆಕ್ಟ್, ಕನಿಷ್ಟ ಕೂಲಿ ಶಾಸನ, ಇತ್ಯಾದಿಗಳನ್ನೂ, ಒಪ್ಪಂದಗಳನ್ನೂ, ಅವಾರ್ಡುಗಳನ್ನೂ ಮಾಲೀಕರು ಉದ್ಧಟತನದಿಂದ ಉಲ್ಲಂಘಿಸುತ್ತಿರುವ ನಿದರ್ಶನಗಳೆಷ್ಟೋ ಇವೆ. ಇವೆಲ್ಲವನ್ನೂ ಸರಿಪಡಿಸಿ ಶಾಸನಗಳೂ, ಒಪ್ಪಂದಗಳೂ, ಅವಾರ್ಡುಗಳೂ (ತೀರ್ಪು) ಜಾರಿಗೆ ಬರುವಂತೆ ಮಾಡಲು ಸರಿಯಾದ ಯಂತ್ರ ಕಲ್ಪಿಸಲು ಮುಂಬಂದಿಲ್ಲ. ಫ್ಯಾಕ್ಟರಿ ಆಕ್ಟ್ ಜಾರಿಗೆ ತರಲಿರುವ ಸರ್ಕಾರಿ ಸಿಬ್ಬಂದಿಯಲ್ಲಿ ಲಂಚ ರುಷುವತ್ತು ತಾಂಡವವಾಡುತ್ತಿದೆ ಎಂಬುದಾಗಿ ಅನೇಕ ಟೀಕೆಗಳಿವೆ. ಹಿಂದುಸ್ತಾನ್ ವಿಮಾನ ಕಾರ್ಖಾನೆ ನೌಕರರ ವಿವಾದದ ವಿಷಯ ಸರ್ಕಾರವು ಒಬ್ಬ ಜನರಲ್ ಮ್ಯಾನೇಜರ್‌ರವರ ಬಾಲಬಡುಕನಂತೆ ನಡೆದುಕೊಂಡಿದೆಯೇ ವಿನಹ, ಧೈರ್ಯದಿಂದ ವಿವಾದವನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ಮುಂಬರಲಿಲ್ಲ. ಸಾಲದ್ದಕ್ಕೆ, ನಿರಾಯುಧ ನಿರಪರಾಧಿ ವಿಮಾನ ಕಾರ್ಖಾನೆ ಕಾರ್ಮಿಕರ ಮೇಲೆ ಗೋಳಿಬಾರು ನಡೆಸಿ ಅಮಾನುಷವಾಗಿ ಲಾಠಿ ಚಾರ್ಜು ಮಾಡಿ, ಮಿತಿಯಿಲ್ಲದಂತೆ ಕೇಸುಗಳನ್ನು ಹೊರಿಸಿ, 11,000 ಕಾರ್ಮಿಕರು ಮಾತ್ರವಲ್ಲ, ಇಡೀ ಮೈಸೂರು ಸಂಸ್ಥಾನದ ಕಾರ್ಮಿಕ ವರ್ಗದ ಕ್ರೋಧಕ್ಕೆ ಪಾತ್ರವಾಗಿದೆ. ಮೈಸೂರು ಸರಕಾರದ ಕಾರ್ಮಿಕ ನೀತಿಯು ವಿವೇಚನಾ ರಹಿತವಾದದ್ದು, ಬಂಡವಾಳಗಾರರಿಗೆ ಅನುಕೂಲವಾದದ್ದು ಎಂಬುದು ಅಭಿಪ್ರಾಯದ ಮಾತಲ್ಲ, ಅನುಭವದ ಮಾತಾಗಿದೆ.

ಕಾರ್ಮಿಕರ ಐಕ್ಯತೆ ಅಗತ್ಯ

ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದಲ್ಲಿ ಈ ಪ್ರತಿಗಾಮಿ, ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಬೇಕೆಂದು ಕಾರ್ಮಿಕ ವರ್ಗ ಈಗಾಗಲೇ ಅರಿತು ಒಂದಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಮಾರ್ಚಿ 27ರಂದು, ಐ.ಎ.ಟಿ.ಯು.ಸಿ. ಹೊರತಾಗಿ, ಎ.ಟಿ.ಯು.ಸಿ., ಹೆಚ್. ಎಂ. ಎಸ್. ಮತ್ತು ಯು ಟಿ.ಯು.ಸಿ. ಸಂಘಗಳು ಒಂದಾಗಿ, ಬ್ಯಾಂಕ್, ಇನ್ಸೂರೆನ್ಸ್ ಮತ್ತಿತರ ನೌಕರರೊಡಗೂಡಿ, ದೇಶದಲ್ಲೆಲ್ಲಾ ಕಾರ್ಮಿಕ ವರ್ಗದ ಬೇಡಿಕೆ ದಿನಾಚರಣೆಯನ್ನು ಆಚರಿಸಿದ್ದು ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ಇದಲ್ಲದೆ, ಕಳೆದ ವರ್ಷ ಕೇಂದ್ರ ಸರ್ಕಾರದ ಎಲ್ಲ ನೌಕರರೂ ಮೊದಲ ಬಾರಿಗೆ ಒಂದುಗೂಡಿ, ಹೋರಾಟ ನಡೆಸಲು ಮುಂಬಂದು, ಎರಡನೆಯ ಪೇಕಮಿಷನ್ ರಚನೆಯಾಗುವಂತೆ ಮಾಡಿ ಸರ್ಕಾರದ ಸೊಕ್ಕನ್ನು ಮುರಿದಿದ್ದಾರೆ: ಈ ಎರಡನೆಯ ಪೇಕಮಿಷನ್, ರೂ. 5ನ್ನು ತಾತ್ಕಾಲಿಕ ಪರಿಹಾರವಾಗಿ ಕೊಡುವಂತಾಗಿ, ಕೇಂದ್ರ ನೌಕರರ ಹೋರಾಟಕ್ಕೆ ಹುರುಪನ್ನೂ, ಉತ್ಸಾಹವನ್ನೂ ನೀಡಿದೆ. ಕಲ್ಲಿದ್ದಲು ಗಣಿ ಕಾರ್ಮಿಕರೂ ಸಹ, ಒಂದಾಗಿ ಹೋರಾಟ ನಡೆಸಿದ್ದರಿಂದ ಅವರ ಕೂಲಿ ಹೆಚ್ಚಾಗಲು, ಇತರ ಅನುಕೂಲಗಳನ್ನು ಪಡೆಯಲು ಆಸ್ಪದವಾಯಿತು. ಬೆಂಗಳೂರಿನ 11,000 ವಿಮಾನ ಕಾರ್ಖಾನೆ ನೌಕರರು ಸರ್ಕಾರದ ದಬ್ಬಾಳಿಕೆಯ ವಿರುದ್ಧ, ತಮ್ಮ ನ್ಯಾಯವಾದ ಕೇಳಿಕೆಗಳಿಗಾಗಿ ಹೋರಾಡಿ, ಎಲ್ಲ ಕೇಂದ್ರ ಕೈಗಾರಿಕೆಗಳ ನೌಕರರ ಒಗ್ಗಟ್ಟಿನ ಹೋರಾಟಕ್ಕೆ ಹಾದಿ ತೋರಿಸಿದ್ದಾರೆ. ಕಾರ್ಮಿಕರ ಹೋರಾಟದ ನಿದರ್ಶನಗಳು ಅನೇಕವಿವೆ.

ಈ ರೀತಿಯ ಒಗ್ಗಟ್ಟಿನ ಹೋರಾಟಗಳಿಂದ, ತನ್ನ ಅತಿಮುಖ್ಯ ಕೇಳಿಕೆಗಳನ್ನು ಪಡೆದಿರುವುದಲ್ಲದೆ, ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಅನೇಕ ವೇಳೆ ಸೋಲಿಸಿದೆ. ಈ ಹೋರಾಟಗಳನ್ನು ಮುಂದುವರಿಸಲು, ಸರ್ಕಾರದ ನೀತಿಯನ್ನು ಬದಲು ಮಾಡಲು, ಕಾರ್ಮಿಕ ವರ್ಗ ಮೇ ದಿನದಂದು ಪಣ ತೊಡಬೇಕಾಗಿದೆ.

ವಿಶ್ವಶಾಂತಿಗಾಗಿ, ಅಣು-ಅಸ್ತ್ರಗಳ ನಿಷೇಧಕ್ಕಾಗಿ ಒಂದಾಗಿರಿ!

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810